

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

Volume : 07 Issue : 193 Wednesday 09-04-2025 E-mail : maruti.b.hosamani76@gmail.com Page: 4 Price : Rs. 1/-

## ಸುಂಕೇಶ್ವರ ಗ್ರಾಮ ಪಂಚಾಯತಿಯ – ಕರ್ಮಕಾಂಡ ಬಟಾ ಬಯಲು






**ಸಿಹಿ ಕಹಿ ಸುದ್ದಿ,**
**ಸುಂಕೇಶ್ವರ** : ಸರಕಾರದ ನಿಯಮದ ಪ್ರಕಾರ ದಾಖಲಾತಿಗಳನ್ನ ಪರಿಶೀಲನೆ ಮಾಡಿ ಮನೆಗಳು ಬಂದರೆ ಜಿ.ಪಿ.ಎಸ್ ಮಾಡಬೇಕು. ಆದರೆ ಮಾನ್ವಿ ತಾಲೂಕಿನ ಸುಂಕೇಶ್ವರಗ್ರಾಮಪಂಚಾಯತಿ ಸಿಬ್ಬಂದಿ ಯಾರದೋ ಆಸ್ತಿಗೆ ಯಾರದೋ ಜಿ.ಪಿ.ಎಸ್ ಮಾಡಿರುವುದು ಬೆಳಕಿಗೆ ಬಂದಿದೆ.

ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಸುಂಕೇಶ್ವರ ಗ್ರಾಮ ಪಂಚಾಯತಿ ಪಿ.ಡಿ.ಓ ನಾಗಭೂಷಣ ಸಾಹೇಬ್ರೆ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಆಸ್ತಿಗಳಿಗೆ ಯಾರದೋ ಆಸ್ತಿಗೆ ಯಾರದೋ ಹೆಸರಿನಲ್ಲಿ ಜಿ.ಪಿ.ಎಸ್ ಮಾಡುತ್ತೀರಾ ಅಂದ ಮೇಲೆ ಸುಂಕೇಶ್ವರ ಗ್ರಾಮ ಪಂಚಾಯತಿಯ ಕರ್ಮಕಾಂಡ ರಾಘವೇಂದ್ರ ಅವರ ಆರೋಪ ದಿಂದ ಬಯಲಾಗಿದೆ.

ಸುಂಕೇಶ್ವರ ಗ್ರಾಮದ ನಿವಾಸಿ ರಾಘವೇಂದ್ರ ಅವರು ಮಾನ್ವಿ ತಾಲೂಕ ಪಂಚಾಯತಿ ಇ.ಓ ಕಚೇರಿಗೆ ದೂರು ಸಲ್ಲಿಸಿ ಸುಂಕೇಶ್ವರ ಗ್ರಾಮ ಪಂಚಾಯತಿಯವರು ನಮ್ಮ ಜಾಗದಲ್ಲಿ ಯಾರದೋ ಹೆಸರಿನಲ್ಲಿ ಜಿ.ಪಿ.ಎಸ್ ಮಾಡಿ ನಮಗೆ ಜಗಳ ಹಚ್ಚುವ ಕೆಲಸ ಮಾಡಲಾಗಿದೆ ಇದನ್ನು ಕೂಡಲೆ ತಡೆ ಹಿಡಿಯುವ ಕೆಲಸ ಮಾಡಬೇಕು ಎಂದು ಹೋರಾಟಗಾರರು ಒತ್ತಾಯಿಸಿದರು ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

# ಗ್ರಾಮ ದೇವತೆ ಶ್ರೀ ಚೌಡೇಶ್ವರಿ ದೇವಿಯ ಜಾತ್ರಾ ಮಹೋತ್ಸವ



**ಸಿಹಿ ಕಹಿ ಸುದ್ದಿ,**
**ಕೋಡಿಹಳ್ಳಿ** : ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ತಳಕು ಹೋಬಳಿಯ ಕೋಡಿಹಳ್ಳಿ ಗ್ರಾಮದಲ್ಲಿ ಇಂದಿನಿಂದ ಗ್ರಾಮೀಣ ಜಾನಪದ ಶೈಲಿಯ ತಮಟೆ ನಗಾರಿ ಉರುಮೆ ನಂದಿಕೋಲು, ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಶ್ರೀ ಚೌಡೇಶ್ವರಿ ದೇವಿಯನ್ನು ಇಂದು ಸಾವಿರಾರು ಭಕ್ತರ ಸಮ್ಮುಖದಲ್ಲಿ ಗಂಗೆ ಪೂಜೆಗೆ ಕರೆ ದೊಯ್ಯಲಾಯಿತು.

ನಂತರ ಹೂವಿನ ಹಾರಗಳಿಂದ, ದೇವಿಯನ್ನು ಶೃಂಗಾರ ಮಾಡಲಾಯಿತು, ಆನಂತರ ಸಕಲ ಪೂಜಾ ವಿಧಿ ವಿಧಾನಗಳಿಂದ ಗಂಗಾ ಪೂಜೆ ಮಾಡಿ ಅದ್ದೂರಿಯಾಗಿ ಗ್ರಾಮದ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಗುತ್ತದೆ.

ಇನ್ನೂ ಗ್ರಾಮದ ಪಾದಗಟ್ಟೆ ಇಂದ ಭವ್ಯವಾದ ಮೆರವಣಿಗೆಯು ವಿವಿಧ ರೀತಿಯ ನೃತ್ಯಗಳು ಡೊಳ್ಳು ಕುಣಿತ, ಕೀಲು ಕುದುರೆ, ಹೂವು, ಹಣ್ಣು ಕಾಯಿ ತಾಯಿಗೆ ಭಕ್ತರು ಸಮರ್ಪಿಸಿವರು, ಮಂಗಳ ವಾದ್ಯಗಳೊಂದಿಗೆ ತಾಯಿಯ ದರ್ಶನ ಪಡೆದು ಸಾವಿರಾರು ಭಕ್ತರು ಶ್ರೀ ಚೌಡೇಶ್ವರಿ ದೇವಿಯ ಕೃಪೆಗೆ ಪಾತ್ರರಾದರು.

ನಂತರ ಗ್ರಾಮದ ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಮುಖಂಡರಾದ ದೊಡ್ಡ ಓಬಯ್ಯ ಮಾತನಾಡಿ 50 ವರ್ಷಗಳ ನಂತರ ನಮ್ಮ ಗ್ರಾಮದ ಕೆರೆ ತುಂಬಿ ಕೋಡಿ ಬಿದ್ದಿರುವುದು ಅತ್ಯಂತ ಸಂತಸದ ವಿಷಯ ಇಂದು ಗ್ರಾಮದಲ್ಲಿ ಮೂರು ದಿನಗಳ ಕಾಲ ತಾಯಿ ಶ್ರೀ ಚೌಡೇಶ್ವರಿ ದೇವಿಯ ಜಾತ್ರಾ ಮಹೋತ್ಸವ ಹಮ್ಮಿಕೊಂಡಿರುವುದು ಅತ್ಯಂತ ಸಂತಸ ತಂದಿದೆ ಎಂದು ಹರ್ಷ ವ್ಯಕ್ತಪಡಿಸಿದರು..

ನಂತರ ಗ್ರಾಮದ ಮುಖಂಡರಾದ ಜಿ.ತಿಪ್ಪೇಸ್ವಾಮಿ ಮಾತನಾಡಿ ಪ್ರತಿ ವರ್ಷದಂತೆ ಈ ವರ್ಷವೂ ಎಲ್ಲ ಸಮುದಾಯದವರು ಪಾಲ್ಗೊಂಡು ಮೂರು ದಿನಗಳ ಕಾಲ ನಡೆಯುವ ಈ ಶ್ರೀ ಚೌಡೇಶ್ವರಿ ದೇವಿಯ ಜಾತ್ರಾ ಮಹೋತ್ಸವವನ್ನು ಯಶಸ್ವಿ ಗೊಳಿಸಬೇಕು, ಈ ತಾಯಿಯು ಗ್ರಾಮದ ಎಲ್ಲ ಸದ್ಭಕ್ತರಿಗೆ ಒಳ್ಳೆಯ ಆಯುಷ್ ಆರೋಗ್ಯ ನೀಡಿ ಕಾಪಾಡಲಿ ಹಾಗೆ ಒಳ್ಳೆಯ ಮಳೆ ಬೆಳೆ ಸಮೃದ್ಧಿ ಯಾಗಲಿ ಎಂದು ಆಶಯ ವ್ಯಕ್ತಪಡಿಸಿದರು.

ಏಪ್ರಿಲ್ 08,09,10 ದಿನಗಳ ಕಾಲ ನಡೆಯುವ ಕೋಡಿಹಳ್ಳಿಯ ಗ್ರಾಮ ದೇವತೆ ಶ್ರೀ ಚೌಡೇಶ್ವರಿ ಜಾತ್ರಾ ಮಹೋತ್ಸವದಲ್ಲಿ ಶ್ರೀ ವಾಲ್ಮೀಕಿ ಯುವಕ ನಾಟ್ಯ ಕಲಾ ಸಂಘದ ವತಿಯಿಂದ 'ಜೋಡಿ ಹಕ್ಕಿಗಳ ಸಂಗಮ" ಅರ್ಥಾತ್ "ಪ್ರೀತಿಗೆ ಶರಣಾದ ಗರುಡ" ಮತ್ತು ಮೆಗಾಸ್ಟಾರ್ ಚಿರಂಜೀವಿ ಯುವ ನಾಟ್ಯ ಕಲಾ ಸಂಘದ ವತಿಯಿಂದ "ಒಲವಿನ ಪ್ರೇಮ ಮಂದಿರ" ಅರ್ಥಾತ್ "ಸೇಡಿನ ವಿಷ ಸರ್ಪ" ಹಾಗೂ ಶ್ರೀ ಜೈ ಭೀಮ್ ಯುವ ನಾಟ್ಯ ಕಲಾ ಸಂಘದ ವತಿಯಿಂದ ಸುಂದರ ಸಾಮಾಜಿಕ ನಾಟಕ "ಕುಡುಕ ಕಟ್ಟಿದ ಪ್ರೇಮ ಕೋಟೆ" ಅರ್ಥಾತ್ "ಹುಚ್ಚ ಮೆಚ್ಚಿದ ಹೂವು" ಎಂಬ ಸುಂದರ ಸಾಮಾಜಿಕ ನಾಟಕವನ್ನು ಕಲಾವಿದರು ಅಭಿನಯಿಸಲಿದ್ದಾರೆ.

ಈ ಸಂದರ್ಭದಲ್ಲಿ ಗ್ರಾಮದ ಮುಖಂಡರಾದ ಗ್ರಾಮದ ಬಾಲಯ್ಯ, ಓಬಣ್ಣ, ಬಸಯ್ಯ, ಪಾಲಯ್ಯ, ಗೋಪಣ್ಣ, ತಿಪ್ಪಯ್ಯ ರೈತರಾದ ನಾಗರಾಜ್, ತಿಪ್ಪೇಸ್ವಾಮಿ, ಸೋಮಶೇಖರ್, ಲಿಂಗಾರೆಡ್ಡಿ, ಭೀಮರೆಡ್ಡಿ, ರುದ್ರಣ್ಣ, ಓಬಯ್ಯ, ಟಿ. ರಾಜಣ್ಣ, ಪಿ.ಪ್ರಹಲ್ಲದ್, ಗ್ರಾಮ ಪಂಚಾಯಿತಿ ಸದಸ್ಯರು ಆದ ಎಸ್. ಟಿ. ರೇವಣ್ಣ, ಟಿ. ರಾಜಣ್ಣ, ದ್ರಾಕ್ಷಾಯಿಣಿ ನಾಗರಾಜ್, ಡಿ.ಓ ಲಕ್ಷ್ಮಿ , ಶ್ರೀಮತಿ ಲಕ್ಷ್ಮೀದೇವಿ ತಿಪ್ಪೇಸ್ವಾಮಿ, ಸಣ್ಣ ನಾಗಯ್ಯ, ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಆದ ಎಂ.ಎಚ್ ತಿಪ್ಪೇಸ್ವಾಮಿ, ಪುಟ್ಟಣ್ಣ, ತಿಪ್ಪೇಸ್ವಾಮಿ, ಓಬಣ್ಣ, ಮಂಜಣ್ಣ, ಮಲ್ಲಯ್ಯ, ಹನುಮಂತಪ್ಪ, ಮಲ್ಲಿಕಾರ್ಜುನಯ್ಯ.ಟಿ, ಲಿಂಗರಾಜ್.ಡಿ, ರುದ್ರಮುನಿ, ಮಂಜುನಾಥ್,ಎಂ.ಟಿ, ವಿನಯ್ ಕುಮಾರ್ ಬಿ.ಎಂ, ಶಿವಕುಮಾರ್ ಭಾರಿ, ಶ್ರೀನಿವಾಸ್, ಮಾರಣ್ಣ, ಹನುಮಂತಪ್ಪ, ದುರುಗಣ್ಣ, ಸಣ್ಣ ತಿಪ್ಪೇಸ್ವಾಮಿ, ಮುಂತಾದ ಊರಿನ ಸಮಸ್ತ ಗ್ರಾಮಸ್ಥರು ಯುವಕರು, ನಾಗರೀಕ ಬಂಧುಗಳು ಉಪಸ್ಥಿತರಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಟಿ.ಶಿವಮೂರ್ತಿ.ಕೋಡಿಹಳ್ಳಿ. ಚಿತ್ರದುರ್ಗ**

## ಕಮತಗಿ ಪ. ಪಂ.ಯಲ್ಲಿ ದೇವರ ದಾಸಿಮಯ್ಯ ಜಯಂತಿ ಆಚರಣೆ



**ಕಮತಗಿ** : ಇಲ್ಲಿನ ಪಟ್ಟಣ ಪಂಚಾಯಿತಿ ಕಾರ್ಯಾಲಯದಲ್ಲಿ ದೇವರ ದಾಸಿಮಯ್ಯ ಜಯಂತಿ ಆಚರಿಸಲಾಯಿತು. ಪಟ್ಟಣ ಪಂಚಾಯತಿ ಅಧ್ಯಕ್ಷ ರಮೇಶ ಜಮಖಂಡಿ ಅವರು ದೇವರ ದಾಸಿಮಯ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನಮನ ಸಲ್ಲಿಸಿದರು. ಬಳಿಕ ಮಾತನಾಡಿದ ಅವರು, ದೇವರದಾಸಿಮಯ್ಯರು ಶರಣ ಸಂಪ್ರದಾಯದ ಪ್ರಮುಖ ತತ್ವಜ್ಞಾನಿ. ಅವರು ಸಮಾನತೆ, ಸಾಮರಸ್ಯ ಮತ್ತು ಭಕ್ತಿ ಮಾರ್ಗವನ್ನು ಪಸರಿಸಿದರು. ಅವರ ಆದರ್ಶಗಳನ್ನು ಅನುಸರಿಸುವುದು ನಮ್ಮ ಕರ್ತವ್ಯ ಎಂದು ಹೇಳಿದರು.

ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಎಫ್.ಎನ್. ಹುಲ್ಲಿಕೇರಿ ಮಾತನಾಡಿ, ದಾಸಿಮಯ್ಯರ ಆದರ್ಶಗಳು ಇಂದಿಗೂ ಪ್ರಸ್ತುತವಾಗಿವೆ. ಅವರು ಮನುಕುಲ ಸೇವೆಗೆ ಪ್ರತಿ ಬದ್ಧರಾಗಿದ್ದರು," ಎಂದರು.

ಕಾರ್ಯಕ್ರಮದಲ್ಲಿ ಪಟ್ಟಣ ಪಂಚಾಯಿತಿಯ ಸದಸ್ಯರು, ಸಿಬ್ಬಂದಿವರ್ಗ ಹಾಗೂ ಸ್ಥಳೀಯ ನೇಕಾರ ಸಮುದಾಯದ ಹಿರಿಯರು ಭಾಗವಹಿಸಿದ್ದರು.


## ನಾಲ್ವಡಿ ಕೃಷ್ಣರಾಜ ಒಡೆಯರ್ ಸದ್ಭಾವನಾ ಪ್ರಶಸ್ತಿಗೆ ಆಯ್ಕೆ











**ಸಿಹಿ ಕಹಿ ಸುದ್ದಿ,**
**ಮೈಸೂರು** : ಕೆ.ಸುಭಾಷ್ ಚಂದ್ರ ಸಮಾಜ ಸೇವೆ, ಸಂಗೀತ ಮಠಪತಿ ಶಿಕ್ಷಣ ಕ್ಷೇತ್ರ, ಮಾದೇವಿ ಪ್ರಸಾದ್ ಸಮಾಜ ಸೇವೆ, ರಮ್ಯಾಚೆಲುವ ಮೂರ್ತಿ ನೃತ್ಯ ಶಿಕ್ಷಕರು, ವಿದುಷಿ ಶ್ರೀ ಅಶ್ವಿನಿ ಜೆ ಗುರು ನೃತ್ಯ ಶಿಕ್ಷಕಿ, ಸೇವೆಯನ್ನು ಪರಿಗಣಿಸಿ ಅವರನ್ನು ಈ ನಾಡಿನ ವಿವಿಧ ಕ್ಷೇತ್ರದ ಸಾಧಕರಿಗೆ ಮೈಸೂರಿನ ಕಾವ್ಯಶ್ರೀ ಚಾರಿಟೇಬಲ್ ಟ್ರಸ್ಟ್ ನೀಡುವ 'ನಾಲ್ವಡಿ ಕೃಷ್ಣರಾಜ ಒಡೆಯರ್ ಸದ್ಭಾವನಾ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಏ.10 ರಂದು ಗುರುವಾರ ನಡೆಯಲಿರುವ ಮೈಸೂರಿನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಭಾಂಗಣದಲ್ಲಿ ಕರ್ನಾಟಕ ಸಾಂಸ್ಕೃತಿಕವೈಭವ–2025ನೇ.ಸಾಲಿನಕಾರ್ಯಕ್ರಮದಲ್ಲಿ ಪ್ರಧಾನ ಮಾಡಲಿದ್ದಾರೆ. ಎಂದು ಕಾವ್ಯಶ್ರೀ ಚಾರಿಟೇಬಲ್ ಟ್ರಸ್ಟ್ (ರಿ) ಕರ್ನಾಟಕ ಕಾರ್ಯದರ್ಶಿಡಾ. ಶಿವಣ್ಣ. ಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಹೋಬಳಿ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಕೆ.ಎಸ್ ವೀರೇಶ್. ಕೆ.ಹೊಸಹಳ್ಳಿ**

## ಬನಹಟ್ಟಿಯಲ್ಲಿ ಭಾವೈಕ್ಯತೆಯನ್ನು ಸಾರುವ ಮಲ್ಲಯ್ಯ ದೇವರನ್ನು ಕರೆದುಕೊಳ್ಳುವ ಕಾರ್ಯಕ್ರಮ



**ಬನಹಟ್ಟಿ** : ನಗರದಲ್ಲಿ ಗುರುವಾರ ಮಲ್ಲಯ್ಯ ದೇವರ ಕಂಬಿಗಳನ್ನು ಕರೆದುಕೊಳ್ಳುವ ಕಾರ್ಯಕ್ರಮವನ್ನು ಸಂಭ್ರಮ ಸಡಗರದಿಂದ ಆಚರಿಸಲಾಯಿತು.

ಶ್ರೀಶೈಲಕ್ಕೆ ತೆರಳಿದ್ದ ಕಂಬಿಗಳನ್ನು ಬೆಳಿಗ್ಗೆ ಮೆರವಣಿಗೆಯ ಮೂಲಕ ಬನಹಟ್ಟಿಯ ಮಲ್ಲಿಕಾರ್ಜುನ ಚಿತ್ರ ಮಂದಿರದ ಹತ್ತಿರದ ಅರಳಿಗಿಡದ ಕಟ್ಟೆಯ ಮೇಲೆ ತಂದು ಪ್ರತಿಷ್ಠಾಪಿಸಲಾಯಿತು.

ನಂತರ ಬೆಳಿಗ್ಗೆ ಹತ್ತಕ್ಕೆ ಊರಿನ ಮತ್ತು ಸೋಮವಾರಪೇಟೆ ಸಮಸ್ತ ದೈವ ಮಂಡಳಿಯ ಹಿರಿಯರು ಕೂಡಿಕೊಂಡು ಸಾಮೂಹಿಕವಾಗಿ ಮಂಗಳಾರುತಿಯನ್ನು ಮಾಡಿದ ನಂತರ ಮಹಿಳೆಯರು ಕಂಬಿಗಳಿಗೆ ಆರತಿಯನ್ನು ಮಾಡಿ ನೈವೇದ್ಯ ಸಲ್ಲಿಸಿದರು.

ಈ ಕಾರ್ಯಕ್ರಮಕ್ಕೆ ಗಂಡು ಮಕ್ಕಳು ದಿವಟಿಗೆಗಳನ್ನು ಮತ್ತು ಹೆಣ್ಣು ಮಕ್ಕಳು ಆರತಿಯನ್ನು ತೆಗೆದುಕೊಂಡು ಬರುವುದು ವಿಶೇಷವಾಗಿದೆ.

ಈ ಸಂದರ್ಭದಲ್ಲಿ ದೇವರಿಗೆ ಹಸಿ ಕಡಲೆ, ಶ್ಯಾವಿಗೆ ಮತ್ತು ಬೆಲ್ಲದ ನೈವೇದ್ಯವನ್ನು ಅರ್ಪಿಸಲಾಯಿತು. ನಂತರ ಹೆಣ್ಣು ಮಕ್ಕಳು ನಗರದ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ತೆರಳಿ ಅಲ್ಲಿ ನೈವೇದ್ಯವನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಹಾಂತಯ್ಯ ಹಿರೇಮಠ, ಸಿದ್ದನಗೌಡ ಪಾಟೀಲ, ಮಲ್ಲಿಕಾರ್ಜುನ ತುಂಗಳ, ಮಹಾಶಾಂತ ಶೆಟ್ಟರ, ಮಲ್ಲಿಕಾರ್ಜುನ ಬಾವಲತ್ತಿ, ಕಿರಣ ಆಳಗಿ, ಮಲ್ಲಣ್ಣ ಕಕಮರಿ, ಪ್ರಶಾಂತ ಕೊಳಕಿ,
ಮಲ್ಲು ಬುಟ್ಟನವರ, ಚೆನ್ನಪ್ಪ ಗುಣಕಿ, ಶಿವಕುಮಾರ ಬಾಗೇವಾಡಿ, ಶಿವಕುಮಾರ ಗಣೇಶನವರ, ರಾಜು ಲುಕ್ಕ, ರಾಜು ಕುಲಕರ್ಣಿ, ರಾಚಯ್ಯ ಮಠಪತಿ, ಚನಬಸಯ್ಯ ಮಠಪತಿ, ಕಲ್ಲಯ್ಯ ಮಠಪತಿ,
ರೇವಪ್ಪ ಗುಣಕಿ, ಬಸವರಾಜ ಅಮಟಿ, ಮಲ್ಲಪ್ಪ ಹೂಲಿ, ರವಿ ಕರಲಟ್ಟಿ, ಮಹಾದೇವ ಶಿರಹಟ್ಟಿ, ಈರಣ್ಣ ಜಿಗಜಿನ್ನಿ, ಶಂಕರ ಜುಂಜಪ್ಪನವರ, ಪ್ರಶಾಂತ ಬಿದರಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

## ಶಿಕ್ಷಕ ಎಚ್. ಎಸ್. ಪೂಜಾರಿ ಸೇವಾ ನಿವೃತ್ತಿ ಕಾರ್ಯಕ್ರಮ

# ಸಾರ್ವಕಾಲಿಕ ವೃತ್ತಿ ಯಾವುದಾದರೂ ಇದ್ದರೆ ಅದು ಶಿಕ್ಷಕ ವೃತ್ತಿ ಮಾತ್ರ: ಎಮ್. ಎಸ್. ಬಡದಾನಿ



**ಬಾಗಲಕೋಟೆ** : ಈ ಜಗತ್ತಿನಲ್ಲಿ ಸಾರ್ವಕಾಲಿಕವಾಗಿ ಗೌರವಿಸಲ್ಪಡುವ ವೃತ್ತಿ ಯಾವುದಾದರೂ ಇದ್ದರೆ ಅದು ಶಿಕ್ಷಕ ವೃತ್ತಿ. ಇದ್ದಾಗಲೂ ಶಿಕ್ಷಕ, ನಿವೃತ್ತಿಯಾದಗಲೂ ಶಿಕ್ಷಕ, ನಾಳೆ ನಾವು ಈ ಜಗತ್ತಿನಲ್ಲಿ ಇಲ್ಲದಿದ್ದರೂ ಕೂಡ ಶಿಕ್ಷಕ ಎಂದು ಸ್ಮರಿಸುವ ವೃತ್ತಿ ಶಿಕ್ಷಕ ಎಂದು ಬಾಗಲಕೋಟೆ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಎಮ್. ಎಸ್. ಬಡದಾನಿ ಹೇಳಿದರು.

ಅವರು ತಾಲೂಕಿನ ಮಲ್ಲಾಪೂರ ಪು.ಕೇ. ಗ್ರಾಮದಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇಂದು ಗುರುವಾರ ಜರುಗಿದ ಶಿಕ್ಷಕ ಎಚ್. ಎಸ್. ಪೂಜಾರಿ ಅವರ ಸೇವಾ ನಿವೃತ್ತಿ ಹೊಂದಿದ ಪ್ರಯುಕ್ತ ಬೀಳ್ಕೊಡುವ ಕಾರ್ಯಕ್ರಮದಲ್ಲಿ ಮಾತನಾಡಿ, ಅತ್ಯಂತ ಕ್ರಿಯಾಶೀಲ ಶಿಕ್ಷಕ ಹೆಚ್. ಎಸ್. ಪೂಜಾರ ಇವರ ಕೈಯಲ್ಲಿ ಶಿಕ್ಷಣವನ್ನು ಪಡೆದಂತಹ ವಿದ್ಯಾರ್ಥಿಗಳು ಈಗ ಸರಕಾರಿ ನೌಕರಿ ಪಡೆಯದಿದ್ದರೂ ಕೂಡಾ ಉತ್ತಮ ಸಂಸ್ಕಾರವಂತರಾಗಿ, ವಿದ್ಯಾವಂತರಾಗಿ ತಮ್ಮ ಭವಿಷ್ಯವನ್ನು ರೂಪಿಸಿಕೊಂಡಿದ್ದಾರೆ. ಸುಮಾರು 24 ವರ್ಷಗಳ ಸುಧೀರ್ಘ ಸೇವೆಯನ್ನು ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸಿದರು. ಯಾವುದೇ ಕಠಿಣ ಕೆಲಸವಿದ್ದರೂ ಅದನ್ನು ಮಾಡಿಯೇ ತಿರುತ್ತೇನೆಂಬ ಹಠ ಅವರಲ್ಲಿತ್ತು. ಇಂತಹ ಸೇವಾ ನಿವೃತ್ತಿ ಹೊಂದಿದ ಇವರ ಸೇವೆ ಅಚ್ಚರಿ ಸಂಗತಿ ಏನೆಂದರೆ ಬಹುತೇಕ ಇದೇ ಗ್ರಾಮದಲ್ಲಿ 24 ವರ್ಷಗಳ ಸುಧೀರ್ಘ ಸೇವೆ ಸಲ್ಲಿಸಿದ ಕೀರ್ತಿ ಇವರದು. ಇಷ್ಟೊಂದು ಗಣನೀಯ ಸೇವೆ ಸಲ್ಲಿಸಿದ್ದಾರೆಂದರೆ ಗ್ರಾಮಸ್ಥರೊಂದಿಗೆ ಒಡನಾಟ, ಮಕ್ಕಳೊಂದಿಗೆ ಮಕ್ಕಳಾಗಿ ಪ್ರೀತಿ, ವಿಶ್ವಾಸವನ್ನು ಗಳಿಸಿ ಅಚ್ಚುಮೆಚ್ಚಿನ ಮೇಷ್ಟ್ರು ಆಗಿದ್ದಾರೆ ಪೂಜಾರಿಯವರು.

> “ನಿವೃತ್ತಿ ಹೊಂದಿದ ಶಿಕ್ಷಕ ಪೂಜಾರಿಯವರಿಗೆ ನಮ್ಮ ಶಾಲೆಯು ಯಾವಾಗಲೂ ಆಹ್ವಾನಿಸುತ್ತದೆ. ಏಕೆಂದರೆ ದಿನಪೂರ್ತಿ ಮಕ್ಕಳೊಂದಿಗೆ ಪಾಠ ಮಾಡಿ ಅಭ್ಯಾಸವಾಗಿರುವ ತಮಗೆ ನಿವೃತ್ತಿ ಜೀವನ ಬೇಸರವಾದಾಗ ಶಾಲೆಗೆ ಬಂದು ಮಕ್ಕಳೊಂದಿಗೆ ಸಮಯ ಕಳೆಯಬಹುದು.
> ◆ ಎಮ್. ಎಸ್. ಬಡದಾನಿ
> ತಾಲೂಕಾ ಕ್ಷೇತ್ರ ಶಿಕ್ಷಣಾಧಿಕಾರಿಗಳು
> ಬಾಗಲಕೋಟೆ

ಈ ಸಂದರ್ಭದಲ್ಲಿ ಶಾಲೆಯ ಮುಖ್ಯಗುರುಗಳಾದ ವಾಯ್. ಡಿ. ಕಿರಸೂರ, ಶಾಲೆಯ ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಗಣಪತಿ ಲಾಗಲೋಟಿ, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನಿರ್ದೇಶಕರಾದ ಬೀರಣ್ಣವರ, ಬಾಗಲಕೋಟ ತಾಲೂಕ ಶಿಕ್ಷಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ ರವಿ ಪದರಾ ಉಪಸ್ಥಿತಿರಿದ್ದರು.

ಈ ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಕರು, ಸಹಶಿಕ್ಷಕರು, ಎಸ್.ಡಿ.ಎಂ.ಸಿ ಸದಸ್ಯರು ಹಾಗೂ ಗ್ರಾಮದ ಹಿರಿಯರು, ಯುವಕ ಮಿತ್ರರು, ಶಾಲಾ ಮುದ್ದು ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಅನಾವಶ್ಯಕವಾಗಿ ನೀರು ವ್ಯಯ ಆಗದಂತೆ ನೋಡಿಕೊಳ್ಳಬೇಕು: ಎಂ. ಸುಂದರೇಶ ಬಾಬು




**ಕೊಪ್ಪಳ :** ತುಂಗಭದ್ರಾ ಎಡದಂಡೆ ಕಾಲುವೆ ನೀರು ಯಾವುದೇ ರೀತಿಯಲ್ಲಿ ಅನಾವಶ್ಯಕವಾಗಿ ವ್ಯಯ ಆಗದಂತೆ ಸಂಬಂದಪಟ್ಟ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸಬೇಕೆಂದು ಕಲಬುರಗಿ ವಿಭಾಗದ ಪ್ರಭಾರಿ ಪ್ರಾದೇಶಿಕ ಆಯುಕ್ತರಾದ ಎಂ. ಸುಂದರೇಶ ಬಾಬು ಹೇಳಿದರು.

ಅವರು ಗುರುವಾರ ಕೊಪ್ಪಳ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಟಿಎಲಬಿಸಿನೀರುನಿರ್ವಹಣೆಕುರಿತುಕೊಪ್ಪಳ ಮತ್ತು ರಾಯಚೂರು ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು. ತುಂಗಭದ್ರಾ ಎಡದಂಡೆ ನೀರು ನಿರ್ವಹಣೆ ಎಸ್‌ಇ. ಇಇ ಸಂಬಂದಪಟ್ಟ ತಾಲ್ಲೂಕಿನ ತಹಶಿಲ್ದಾರರು ಸೇರಿದಂತೆ ಇತರೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳೊಂದಿಗೆಜೂಮ್ ವಿಡಿಯೋ ಕಾನ್ಪರೇನ್ಸ್ ಮೂಲಕ ಸಭೆ ನಡೆಸಿ ಮಾತನಾಡಿದರು.

ಸಭೆಯಲ್ಲಿ ಈಗಾಗಲೇ ನಿರ್ಧರಿಸಿದಂತೆ 3 ಸಾವಿರ ಕ್ಯೂಸೆಕ್ಸ್‌ನೀರನ್ನುಪ್ರತಿದಿನ ಬಿಡಬೇಕು. ಸಂಬಂಧಿಸಿದ ಡಿಸ್ಟ್ರಿಬ್ಯೂಟಗಳಲ್ಲಿ ಈಗಾಗಲೇ ಆದೇಶಿಸಿದಂತೆ ಗೇಜಗಳ ನಿಯಂತ್ರಣ ಮಾಡಲು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸಬೇಕು. ಯಾವುದೇರೀತಿಯಲ್ಲಿನೀರುಅನಾವಶ್ಯಕವಾಗಿವ್ಯಯ ಆಗದಂತೆ ನೋಡಿಕೊಳ್ಳಬೇಕೆಂದು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಈ ಜೂಮ್ ವಿಡಿಯೋ ಕಾನ್ಪರೇನ್ಸ ಸಭೆಯಲ್ಲಿ ಕೊಪ್ಪಳ ಮತ್ತು ರಾಯಚೂರು ಜಿಲ್ಲೆಯ ಜಿಲ್ಲಾಧಿಕಾರಿಗಳು. ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು. ಅಪರ ಜಿಲ್ಲಾಧಿಕಾರಿಗಳು. ಸಹಾಯಕ ಆಯುಕ್ತರು. ತುಂಗಭದ್ರಾ ಎಡದಂಡೆ ನಿರ್ವಹಣೆ ಎಸ್.ಇ ಹಾಗೂ ಇಇ ಸಂಬಂಧಿಸಿದ ತಾಲ್ಲೂಕಿನ ತಹಶೀಲ್ದಾರರು. ಟಾಸ್ಕಪೋರ್ಸ್ ಸಮಿತಿಯವರು ಸೇರಿದಂತೆ ಇತರೆ ಸಂಬಂಧಿಸಿದ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ‘ಶ್ರೇಷ್ಠ ಕೃಷಿಕ-ಸಮಗ್ರ ಕೃಷಿ ಪದ್ಧತಿ’ ಪ್ರಶಸ್ತಿ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

**ಕೊಪ್ಪಳ :** ಜಂಟಿ ಕಾರ್ಯದರ್ಶಿ, ಅಲುಮಿನಿ ಅಸೋಶಿಯೇಷನ್-ಕೃಷಿ ವಿಶ್ವ ವಿದ್ಯಾಲಯ, ಹೆಬ್ಬಾಳ, ಬೆಂಗಳೂರು ಇವರು, ಕರ್ನಾಟಕ ರಾಜ್ಯದಲ್ಲಿ ಸುಸ್ಥಿರ ಕೃಷಿಯ ಬೆಳವಣಿಗಾಗಿ “ಸಮಗ್ರ ಕೃಷಿ ಪದ್ಧತಿ” ಯನ್ನು ಉತ್ತೇಜಿಸುವ ಸಲುವಾಗಿ 2024-25ನೇ ಸಾಲಿಗೆ, ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಹಾಗೂ ಕರಾವಳಿ, ಮಲೆನಾಡು ಪ್ರದೇಶದ “ಸಮಗ್ರ ಕೃಷಿ ಪದ್ಧತಿ” ಅಳವಡಿಸಿಕೊಂಡಿರುವ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಅವಧಿ ವಿಸ್ತರಿಸಲಾಗಿದೆ.

ಅರ್ಹ ರೈತರು, ಅಲುಮಿನಿ ಅಸೋಶಿಯೇಷನ್-ಕೃಷಿ ವಿಶ್ವ ವಿದ್ಯಾಲಯ, ಹೆಬ್ಬಾಳ, ಬೆಂಗಳೂರು ರವರು ನಿಗದಿಪಡಿಸಿರುವನಮೂನೆಯಲ್ಲಿಅರ್ಜಿಗಳನ್ನುಭರ್ತಿ ಮಾಡಿ, ಏಪ್ರಿಲ್ 9ರ ಒಳಗೆ ‘ದಿ ಸೆಕ್ರೇಟರಿ, ಅಲುಮಿನಿ ಅಸೋಶಿಯೇಷನ್ ಯುಎಎಸ್ ಕನ್ವೆನ್‌ಷನ್ ಸೆಂಟರ್, ಹೆಬ್ಬಾಳ, ಬೆಂಗಳೂರು-560024’ ಈ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ಪ್ರಶಸ್ತಿಯ ಮೊತ್ತವು ರೂ. 25000 ಗಳು ಇರುತ್ತದೆ. ಅರ್ಜಿ ನಮೂನೆಗಾಗಿ ಸಮೀಪದ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಸಂಪರ್ಕಿಸಬಹುದಾಗಿದೆ ಎಂದು ಕೊಪ್ಪಳ ಜಂಟಿ ಕೃಷಿ ನಿರ್ದೇಶಕ ಟಿ.ಎಸ್. ರುದ್ರೇಶಪ್ಪ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇ-ಖಾತಾ ಅಭಿಯಾನಕ್ಕೆ ಕೊಪ್ಪಳ ನಗರಸಭೆ ಅಧ್ಯಕ್ಷರಿಂದ ಚಾಲನೆ
## ಆಸ್ತಿಯ ಎ ಖಾತ, ಬಿ ಖಾತ ಸುಲಭವಾಗಿ ಪಡೆದುಕೊಳ್ಳಿ: ಅಮ್ಜದ್ ಪಟೇಲ್

**ಕೊಪ್ಪಳ :** ಸಾರ್ವಜನಿಕರು ತಮ್ಮ ಆಸ್ತಿಯ ಎ ಖಾತ ಮತ್ತು ಬಿ ಖಾತವನ್ನು ಸುಲಭವಾಗಿ ಪಡೆದುಕೊಳ್ಳುವಂತೆ ಕೊಪ್ಪಳ ನಗರಸಭೆಯ ಅಧ್ಯಕ್ಷರಾದ ಅಮ್ಜದ್ ಪಟೇಲ್ ಹೇಳಿದರು.

ಅವರು ಗುರುವಾರ ನಗರದ ಮೂರನೇ ವಾರ್ಡಿನಲ್ಲಿ ಕೊಪ್ಪಳ ನಗರಸಭೆ ವತಿಯಿಂದ ಹಮ್ಮಿಕೊಂಡಿದ್ದ ಕೊಪ್ಪಳ ನಗರಸಭೆ ಕಾರ್ಯಾಲಯದ ವತಿಯಿಂದ ಇ-ಖಾತಾ ಅಭಿಯಾನ ಮತ್ತು ಎ ಖಾತ ಮತ್ತು ಬಿ ಖಾತ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಸುಮಾರು ವರ್ಷಗಳಿಂದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇ ಖಾತಾ ಮತ್ತು ಬಿ ಖಾತ, ಎಂಬಿ ನಂಬರ್ ನಮೂನೆ 3 ನ್ನು ಪಡೆಯಲು ಸಾರ್ವಜನಿಕರು ಪರದಾಡುವಂತ ಸ್ಥಿತಿ ಗಮನಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರ



ನೇತೃತ್ವದ ರಾಜ್ಯ ಸರ್ಕಾರವು ಸಾರ್ವಜನಿಕರ ಅನುಕೂಲಕ್ಕಾಗಿ ಮನೆಬಾಗಿಲಿಗೆ ಎ ಖಾತ ಮತ್ತು ಬಿ ಖಾತ ಫಾರಂ ನಂಬರ್ 3ರ ವಿತರಣೆ ಅಭಿಯಾನವನ್ನು ಹಮ್ಮಿಕೊಂಡಿದ್ದು, ಇದರಿಂದಾಗಿ ತುಂಬಾ ಅನುಕೂಲವಾಗಿದೆ. ನಮ್ಮ ಸರ್ಕಾರವು ಹಮ್ಮಿಕೊಂಡಿರುವ ಈ ಅಭಿಯಾನದಡಿ ಮೂರು ತಿಂಗಳ ಒಳಗಾಗಿ ಕೊಪ್ಪಳ ನಗರದ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಎ ಖಾತ ಬಿ ಖಾತದಿಂದ ಜನರಿಗೆ ಸರ್ಕಾರದಿಂದವಿವಿಧಗೃಹಯೋಜನೆಗಳಡಿ ಸಹಾಯಧನ, ಸಾಲ ಸೌಲಭ್ಯಗಳು ಅತ್ಯಂತ ಸುಲಭವಾಗಿ ಸಿಗಲಿವೆ. ಇಂತಹ ನೂತನ ಯೋಜನೆಯನ್ನು ಕರ್ನಾಟಕ ಸರ್ಕಾರ ಹಮ್ಮಿಕೊಂಡಿದ್ದು, ಇದರಿಂದ ಕೊಪ್ಪಳ ನಗರಸಭೆ ವ್ಯಾಪ್ತಿಯ ಸುಮಾರು 8 ಸಾವಿರಕ್ಕೂ ಅಧಿಕ ನಿವೇಶನಗಳು, ಆಶ್ರಯ ಮನೆಗಳಿಗೆ ಅನುಕೂಲವಾಗಲಿದೆ. ಕೊಪ್ಪಳ ನಗರದ ಪ್ರತಿಯೊಬ್ಬರು ತಮ್ಮ ಮನೆಯ ಆಸ್ತಿ ದಾಖಲೆಯ ಪತ್ರಗಳನ್ನು ನೀಡಿ, ಎ ಖಾತ ಮತ್ತು ಬಿ ಖಾತ ಪಡೆದುಕೊಂಡು ಈ ಅಭಿಯಾನವನ್ನು ಯಶಸ್ವಿಗೊಳಿಸುವಂತೆ ಸಾರ್ವಜನಿಕರಿಗೆ ಅವರು ಕರೆ ನೀಡಿದರು.

ಈ ಸಂದರ್ಭದಲ್ಲಿ ಕೊಪ್ಪಳ ನಗರಸಭೆಯ ಉಪಾಧ್ಯಕ್ಷರಾದ ಅಶ್ವಿನಿ ಗದುಗಿನಮಠ್, ಪೌರಾಯುಕ್ತರಾದ ಗಣಪತಿ ಪಾಟೀಲ್, ಓಣಿಯ ಹಿರಿಯರಾದ ಖಾಜಾ ಹುಸೇನ್ ರೆವಡಿ, ಸಲೀಂ ಅಳವಂಡಿ, ಹಜರತ್ ಮುಜಾವರ್ ಸೇರಿದಂತೆ ನಗರಸಭೆಯ ಕಂದಾಯ ವಿಭಾಗದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಮತ್ತಿತರರು ಉಪಸ್ಥಿತರಿದ್ದರು.

## ಎಡದಂಡೆ ಕಾಲುವೆಗೆ ಏಪ್ರಿಲ್ 20ರವರೆಗೆ ನೀರು ಹರಿಸಲು ಒತ್ತಾಯಿಸಿ ಪ್ರತಿಭಟನೆ
## ರೈತರ ವಿಷಯದಲ್ಲಿ ಸಚಿವ ತಂಗಡಗಿ ನಿರ್ಲಕ್ಷ ಸರಿಯಲ್ಲ; ಕೊಪ್ಪಳದಲ್ಲಿ ಶರಣಗೌಡ ಆಕ್ರೋಶ

**ಕೊಪ್ಪಳ :** 123ನೇ ನೀರಾವರಿ ಸಲಹಾ ಸಮಿತಿಯಲ್ಲಿ ಏಪ್ರಿಲ್ 10 ವರೆಗೆ ನೀರು ಹರಿಸುತ್ತೇವೆ ಎಂದು ಸರ್ಕಾರ ಹಾಗೂ ಸಚಿವರಾದ ಶಿವರಾಜ ತಂಗಡಗಿ ರವರು ಹೇಳಿ, ಈಗ ರೈತರ ವಿಷಯದಲ್ಲಿ ನಿರ್ಲಕ್ಷ ತೋರುತ್ತಿದ್ದಾರೆ ಎಂದು ಶರಣೆಗೌಡ ರವರು ಆಕ್ರೋಶ ವ್ಯಕ್ತಪಡಿಸಿದರು.

ಗುರುವಾರ ಕೊಪ್ಪಳ ನಗರದ ಪತ್ರಿಕಾ ಭವನದಲ್ಲಿ ಅಖಿಲ ಕರ್ನಾಟಕ ರಾಜ್ಯ ಅನ್ನದಾತ ರೈತ ಸಂಘದ ರಾಜ್ಯಾಧ್ಯಕ್ಷ ಶರಣಗೌಡ ಕೆಸರಟ್ಟಿ ಸುದ್ದಿಗಾರರೊಂದಿಗೆ ಮಾತನಾಡಿ,ಕಲಬುರ್ಗಿಯ ವಿಭಾಗದ ಪ್ರಾದೇಶಿಕ ಆಯುಕ್ತರು ಅಧಿಕೃತವಾಗಿ ತುಂಗಭದ್ರಾ ಎಡದಂಡೆಯ ಮುಖ್ಯಕಾಲುವೆಗೆ ಕುಡಿಯುವ ನೀರು ಒಳಗೊಂಡಂತೆ ನಿಂತ ಬೆಳೆಗಳ ಸಂರಕ್ಷಣೆ ಸಲುವಾಗಿ 3800 ಕ್ಯೂಸೆಕ್ಸ್ ನೀರನ್ನು ಏಪ್ರಿಲ್ 01 ರಿಂದ ಏಪ್ರಿಲ್ 05 ರವರೆಗೆ ಹರಿಸಲಾಗುವುದು ಎಂದು ಆದೇಶ ಮಾಡಿದ್ದಾರೆ. ಈ ಆದೇಶವು ಎಡ ದಂಡೆ ಭಾಗದ ರೈತರ ಪಾಲಿಗೆ ಮರಣಶಾಸನವಾಗಿ ಮಾರ್ಪಡಲಿದ್ದು, ರೈತರು ಬೆಳೆಗಳನ್ನು ಉಳಿಸಿಕೊಳ್ಳಲು ನೀರಿಗಾಗಿ ಹೋರಾಟ ಮಾಡುವುದು ಇಂದು ಅನಿವಾರ್ಯವಾಗಿದೆ.ರಾಜ್ಯ ಸರ್ಕಾರ ರೈತರ ಪಾಲಿಗೆ ಇದ್ದು ಇಲ್ಲದಂತಾಗಿದೆ ಏಪ್ರಿಲ್ 10ರವರೆಗೆ ನೀರು ಕೊಡುತ್ತೇವೆ ಎಂದು ಭರವಸೆಯನ್ನು ನೀಡಿದ ರಾಜ್ಯ




ಸರ್ಕಾರ ಮತ್ತು ಜನಪ್ರತಿನಿಧಿಗಳು ಕೊಟ್ಟ ಮಾತನ್ನು ತಪ್ಪಿದೆ, ಏಪ್ರಿಲ್ 20 ರವರೆಗೆ ನೀರನ್ನು ಕಡಾ ಖಂಡಿತವಾಗಿ ಬೆಳೆಗಳಿಗೆ ಹರಿಸಬೇಕು, ಎಡದಂಡೆ ಭಾಗದ ರೈತರ ಬೆಳೆಗಳು ಒಣಗಿದರೆ ಮತ್ತು ರೈತರು ಆರ್ಥಿಕ ಸಂಕಷ್ಟಕ್ಕೆ ಒಳಗಾದರೆ ಅದಕ್ಕೆ ರಾಜ್ಯ ಸರ್ಕಾರ ಮತ್ತು ಎಡದಂಡೆ ಭಾಗದ ಜನಪ್ರತಿನಿಧಿಗಳ ನೇರ ಹೊಣೆಯಾಗಲಿದ್ದಾರೆ.ಕಲಬುರ್ಗಿ ವಿಭಾಗದ ಪ್ರಾದೇಶಿಕ ಆಯುಕ್ತರು ಹೊರಡಿಸಿರುವ ಆದೇಶದಲ್ಲಿ ಅಚ್ಚರಿಯ ಅಂಶಗಳು ಬೆಳಕಿಗೆ ಬಂದಿವೆ. ಕರ್ನಾಟಕ ನೀರಾವರಿ ನಿಗಮ ನಿಯಮಿತ ನೀರಾವರಿ ಕೇಂದ್ರ ವಲಯ

ಮುನಿರಾಬಾದ್ ನ ಮುಖ್ಯ ಇಂಜಿನಿಯರ್ ಅವರುಗಳುಸಲ್ಲಿಸಿರುವವರದಿಯನಾಧರಿಸಿ, ಕೊಪ್ಪಳ ಜಿಲ್ಲಾಧಿಕಾರಿಗಳು ಹಾಗೂ ರಾಯಚೂರು ಜಿಲ್ಲಾಧಿಕಾರಿಗಳು ಏಪ್ರಿಲ್ 01ರಿಂದ ಏಪ್ರಿಲ್ 5ರವರೆಗೆ ಎಡದಂಡೆ ಕಾಲುವೆಗೆ ಕುಡಿಯುವ ನೀರು ಹಾಗೂ ನಿಂತ ಬೆಳೆಗಳ ಸಂರಕ್ಷಣೆಗಾಗಿ 3800 ಕ್ಯೂಸೆಕ್ಸ್ ನಂತೆ ನೀರು ಹರಿಸುವುದಾಗಿ ಆದೇಶವನ್ನು ಹೊರಡಿಸಲಾಗಿದೆ. ಈ ಆದೇಶದಲ್ಲಿ ನೀರಿನ ಲಭ್ಯತೆ ಹಂಚಿಕೆಯಲ್ಲಿ ಲೆಕ್ಕಾಚಾರ ತಪ್ಪಾಗಿ ಸೂಚಿಸಿ ರೈತರ ಬೆಳೆಗಳಿಗೆ ಸಮರ್ಪಕ ನೀರು ನೀಡದೆ ಪರ್ಯಾಯವಾಗಿ ನೀರನ್ನು ಎಡದಂಡೆ ಭಾಗದ ರಾಜಕಾರಣಿಗಳು ಸ್ವಾರ್ಥಕ್ಕಾಗಿ ಫ್ಯಾಕ್ಟರಿಗಳಿಗೆ ಮಾರಾಟ ಮಾಡಬಹುದು ಎಂಬುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಸರ್ಕಾರದ ಈ ಲೆಕ್ಕಾಚಾರವನ್ನು ಅಖಿಲ ಕರ್ನಾಟಕ ರಾಜ್ಯ ರೈತ ಸಂಘ ಸಂಪೂರ್ಣವಾಗಿ ವಿರೋಧಿಸುತ್ತದೆ. ಏಪ್ರಿಲ್ 08 ರಂದು ಗಂಗಾವತಿ ಮತ್ತು ಕಾರಟಗಿ ಎರಡು ತಾಲೂಕುಗಳನ್ನುಸಂಪೂರ್ಣವಾಗಿಬಂದು ಮಾಡಲಾಗುತ್ತದೆ ಈ ಬಂದ್ ಕರೆಯಲ್ಲಿ ವಿವಿಧ ರೈತ ಪರ ಸಂಘಟನೆಗಳು ಸೇರಿದಂತೆ ಹಲವು ಸಂಘಟನೆಗಳು ಭಾಗವಹಿಸಲಿದ್ದು ಒಕ್ಕುರಳ ಕೂಗಿನೊಂದಿಗೆ ರೈತರ ಬೆಳೆ ಸಂರಕ್ಷಣೆಗಾಗಿಆಗ್ರಹಿಸಿಸರ್ಕಾರದವಿರೋಧ ನೀತಿಯನ್ನು ಖಂಡಿಸಲಾಗುತ್ತದೆ. ಅಂಗಡಿ ಮುಂಗಟ್ಟುಗಳು ಸ್ವಯಂ ಪ್ರೇರಿತವಾಗಿ ಬಂದ್ ಕರೆಯಲ್ಲಿ ಭಾಗವಹಿಸಲು ಕರೆ ನೀಡಲಾಗುತ್ತದೆ, ಏಪ್ರಿಲ್ 09,2025 ರಂದು ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ್ ಎಸ್ ತಂಗಡಗಿ ಅವರ ಗೃಹ ಕಚೇರಿಗೆ ವಿವಿಧ ಸಂಘಟನೆಗಳು ಮತ್ತು ಸಾವಿರಾರು ಸಂಖ್ಯೆಯಲ್ಲಿ ರೈತರೊಂದಿಗೆ ಮುತ್ತಿಗೆ ಹಾಕಿ ರೈತರ ಬೆಳೆ ಉಳಿಸಲು ನೀರಿಗಾಗಿ ಪ್ರತಿಭಟಿಸಲಾಗುತ್ತದೆ. ರೈತರ ವಿಷಯದಲ್ಲಿ ಸಚಿವ ಶಿವರಾಜ ತಂಗಡಗಿ ರವರ ನಿರ್ಲಕ್ಷತನ ಸರಿಯಲ್ಲ ಎಂದು ಹೇಳಿದರು. ನಂತರ ರಾಜ್ಯ ಉಪಾಧ್ಯಕ್ಷರಾದ ಕೊತ್ವಾಲ್ ಶರಣಪ್ಪ ಮಾತನಾಡಿ, ಇಂದಿನ ಸರ್ಕಾರ ತುಂಗಭದ್ರಾ ಕಾಡಾ ಕಚೇರಿಯಲ್ಲಿ ನೀರಾವರಿ ಸಲಹಾ ಸಮಿತಿ ಸಭೆ ಮಾಡುತ್ತಿದ್ದರು, ಜಿಲ್ಲೆಯ ಉಸ್ತುವಾರಿ ಸಚಿವರಾದ ಶಿವರಾಜ ತಂಗಡಗಿ ರವರು ಬೆಂಗಳೂರಿನಲ್ಲಿ ನೀರಾವರಿ ಸಲಹಾ ಸಮಿತಿ ಸಭೆ ಮಾಡುತ್ತಿದ್ದಾರೆ ಇದು ನಿಜಕ್ಕೂ ದುರದೃಷ್ಟಕರ. ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ರೈತರು ಪಾಲ್ಗೊಳ್ಳುತ್ತಿದ್ದೆವು ಸಂಪೂರ್ಣ ಮಾಹಿತಿ ದೊರೆಯುತ್ತಿತ್ತು, ಮತ್ತೆ ಸಚಿವ ಶಿವರಾಜ ತಂಗಡಗಿ ರವರು ಹಾಗೂ ಸರ್ಕಾರವು ಕೊಪ್ಪಳ ತಾಲೂಕಿನ ಮುನಿರಾಬಾದ್ ಬಳಿಯ ಕಾಡಾ ಕಚೇರಿಯಲ್ಲಿಯೇ ನೀರಾವರಿ ಸಲ ಸಮಿತಿ ಸಭೆ ನಡೆಯಬೇಕು ಎಂದರು. ಈ ಸಂದರ್ಭದಲ್ಲಿ ಅಖಿಲ ಕರ್ನಾಟಕ ರಾಜ್ಯ ಅನ್ನದಾತ ರೈತ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಬಸವಣ್ಣನವರ ಆಚಾರ ಪತ್ನಿ ಗಂಗಾಂಬಿಕೆ ಸ್ಮರಣೋತ್ಸವ


ವಿಶ್ವಗುರು ಬಸವಣ್ಣನವರು ಆರಂಭಿಸಿದ ಕ್ರಾಂತಿಕಾರ್ಯದಲ್ಲಿ ಅವರ ಕುಟುಂಬವೂ ತೊಡಗಿತ್ತು. ಅಕ್ಕನಾಗಮ್ಮ ತಾಯಿ ಬಸವಣ್ಣನವರ ಕಾರ್ಯಕ್ಕೆ ಬಹುದೊಡ್ಡ ಶಕ್ತಿಯಾಗಿದ್ದರು. ಅವರು ಬಸವಣ್ಣನವರ ಸತಿಯರಾದ ಗಂಗಾಂಬಿಕೆ ಮತ್ತು ನೀಲಾಂಬಿಕೆಯವರನ್ನು ಜೊತೆಗೂಡಿಸಿಕೊಂಡು ಮಹಾಮನೆಗೆ ಆಗಮಿಸುತ್ತಿರುವ ಶರಣ ಬಳಗಕ್ಕೆ ಅನ್ನ, ಅರಿವು, ಆಶ್ರಯ ನೀಡುವ ಕಾರ್ಯ ಮಾಡಿದರು. ನೀಲಾಂಬಿಕೆ ಬಸವಣ್ಣನವರ ವಿಚಾರಪತ್ನಿ ಎಂದು ಹೇಳಿಕೊಂಡರೆ, ಗಂಗಾಂಬಿಕೆ ಅವರು ಬಸವಣ್ಣನವರ ಆಚಾರಪತ್ನಿ ಯಾಗಿರುವುದು ಬಹುವಿಶೇಷ. ಗಂಗಾಂಬಿಕೆ ಬಲದೇವನ ಮಗಳು. ಬಲದೇವನ ಮಂಗಳವೇಡೆಯ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿ ಆಗಿದ್ದನು. ಬಲದೇವ ಮಗಳ ದೈವಭಕ್ತಿ, ವೀರತನ ಕಂಡು ಸಂತಸ ಪಡುತ್ತಿದ್ದ. ಗಂಗಾಂಬಿಕೆಗೆ ಬಿಲ್ವಿದ್ಯೆ, ಕತ್ತಿವರಸೆ ವಿದ್ಯೆಯ ಜೊತೆಗೆ ಕನ್ನಡ, ಸಂಸ್ಕೃತ, ಸಂಗೀತ ಕಲಿಸಿದ. ಬಲದೇವ ತನ್ನ ಮಗಳ ಪ್ರತಿಭೆ ಕಂಡು ಹಿರಿ ಹಿರಿ ಹಿಗ್ಗುತ್ತಿದ್ದನು. ದೇವರು ಪ್ರತಿಭೆಯ ಜೊತೆಗೆ ಅಪ್ರತಿಮ ಸೌಂದರ್ಯವನ್ನು ಕರುಣಿಸಿದ. ದುರ್ದೈವದಿಂದ ಗಂಗಾಂಬಿಕೆ ಮಗುವಿದ್ದಾಗಲೇ ತಾಯಿ ಲಿಂಗೈಕ್ಯಳಾಗಿದ್ದಳು. ಬಲದೇವನೇ ತಾಯಿ-ತಂದೆಯಾಗಿ ಪ್ರೀತಿ ಕರುಣಿಸಿದ.

ನೋಡು ನೋಡುತ್ತಿದ್ದಂತೆ ಗಂಗಾಬಿಕೆ ಬೆಳೆದು ದೊಡ್ಡವಳಾದಳು. ಬಲದೇವ ಮಗಳಿಗೆ ಯೋಗ್ಯ ವರ ನೋಡಬೇಕೆಂದು ಆಲೋಚನೆ ಮಾಡುತ್ತಿದ್ದ. ಯೋಗಾಯೋಗವೆಂಬಂತೆ ಕೂಡಲಸಂಗಮದಿಂದ ಬಲದೇವ ಮಂತ್ರಿಗಳಿಗೆ ಆಮಂತ್ರಣ ಬಂದಿತ್ತು. ಆಗಿನ ಕಾಲದಲ್ಲಿ ಕೂಡಲಸಂಗಮ ದಕ್ಷಿಣ ಭಾರತದಲ್ಲಿಯೇ ಬಹುದೊಡ್ಡ ವಿದ್ಯಾಕೇಂದ್ರವಾಗಿತ್ತು. ಪ್ರತಿವರ್ಷ ಪದವಿ ಪ್ರದಾನ ಸಮಾರಂಭ ನಡೆಯುತ್ತಿತ್ತು . ಬಲದೇವ ಮಂತ್ರಿಗಳಿಗೆ ವಿದ್ಯಾಕೇಂದ್ರದ ಅಧಿಪತಿಯಾದ ಈಶಾನ್ಯ ಗುರುಗಳು ಮುಖ್ಯ ಅತಿಥಿಯಾಗಿ ಭಾಗವಹಿಸಬೇಕೆಂದು ಆಮಂತ್ರಣ ಕಳಿಸಿದರು. ಗುರುಗಳ ಆಜ್ಞೆಯಂತೆ ಬಲದೇವ ಮಂತ್ರಿ ಆಮಂತ್ರಣ ಸ್ವೀಕರಿಸಿ, ಕೂಡಲಸಂಗಮಕ್ಕೆ ಆಗಮಿಸಿದನು. ಕೂಡಲಸಂಗಮದಲ್ಲಿ ಪದವಿ ಪ್ರದಾನ ಸಮಾರಂಭ ಆರಂಭವಾಯಿತು. ಬಸವಣ್ಣನವರಲ್ಲಿರುವ ಪ್ರತಿಭೆ, ಶಿಸ್ತು ಸಂಘಟನಾ ಶಕ್ತಿ ಹಾಗೂ ಅಪಾರ ಜೀವ ಕಾರುಣ್ಯ ಇರುವುದನ್ನು ಗುರುತಿಸಿದ ಗುರುಗಳು ಈ ಕಾರ್ಯಕ್ರಮದ ಸಂಪೂರ್ಣ ಜವಾಬ್ದಾರಿ ಬಸವಣ್ಣನವರಿಗೆ ಒಪ್ಪಿಸಿದ್ದರು. ಸಮಾರಂಭದಲ್ಲಿ ವಿದ್ಯಾರ್ಥಿಗಳ ಪರವಾಗಿ ಜನಪರ ಭಕ್ತಿಸಂಪನ್ನ ಸಮಾಜ ವ್ಯವಸ್ಥೆಯ ಕುರಿತ ಬಸವಣ್ಣನವರ ಮಾತುಗಳು ಬಲದೇವನಿಗೆ ಹಿಡಿಸಿದವು. ಅವರ ಸಾಮಾಜಿಕ ಚಿಂತನೆ, ಆ ದಿನಮಾನದ ಅಗತ್ಯವು ಆಗಿದೆ ಎಂದು ಆಲೋಚಿಸಿದರು. ಅವರ ವಿದ್ವತ್ತು ಮತ್ತು ಲೋಕಹಿತದ ಕಳಕಳಿಯ ಮಾತಿನ ಪ್ರಭಾವ ಬಲದೇವನ ಮೇಲೆ ಆಯಿತು. ಅವರು ಗುರುಗಳಿಗೆ ಈ ಯುವಕ ಯಾರು? ಎಂದು ವಿಚಾರಿಸಿದರು. ಗುರುಗಳ ಆಶ್ಚರ್ಯದಿಂದ, ನಿಮಗೆ ಗೊತ್ತಿಲ್ಲವೇ ? ಇವನು ನಿಮ್ಮ ತಂಗಿ ಮಾದಲಾಂಬಿಕೆಯ ಮಗ ಬಸವಣ್ಣ, ನಿನ್ನ ಸೋದರಳಿಯ. ಗುರುಗಳ ಈ ಮಾತು ಕೇಳಿ ಬಲದೇವನಿಗೆ ಅಪಾರ ಸಂತೋಷವಾಯಿತು. ಅವರಿಗೆ ಗಂಗಾಂಬಿಕೆಯ ನೆನಪಾಯಿತು. ಅವನು ನನ್ನ ಮಗಳಿಗೆ ಯೋಗ್ಯ ವರ ಎಂದು ಭಾವಿಸಿದರು. ಬಲದೇವರು ಆ ಸಮಾರಂಭಕ್ಕೆ ತಮ್ಮ ಮಗಳಿಗೂ ಕರೆದುಕೊಂಡು ಬಂದಿದ್ದರು. ಗುರುಗಳಿಗೆ ಏಕಾಂತದಲ್ಲಿ ದರ್ಶನ ಪಡೆದು ತನ್ನ ಇಚ್ಛೆ ವ್ಯಕ್ತಪಡಿಸಿದರು. ಗುರುಗಳು ಅಕ್ಕನಾಗಮ್ಮನವರನ್ನು ಕರೆಯಿಸಿ ಬಲದೇವ ಮಂತ್ರಿಯ ವಿಚಾರ ತಿಳಿಸಿದರು. ಅಕ್ಕನಾಗಮ್ಮನವರಿಗೆ ಖುಷಿಯಾಯಿತು. ಅವರು ಬಸವಣ್ಣನವರ ಜೊತೆ ಮಾತನಾಡಿ ಗುರುಗಳಿಗೆ ಒಪ್ಪಿಗೆ ನೀಡಿದರು.

**ದಾಂಪತ್ಯ ಜೀವನ:**

ಬಲದೇವ ಮಂತ್ರಿ ಗಂಗಾಂಬಿಕೆ ಮತ್ತು ಬಸವಣ್ಣನವರ ವಿವಾಹ ಬಹು ವಿಜೃಂಭಣೆಯಿಂದ ನೆರವೇರಿಸಿದರು. ಗಂಗಾಂಬಿಕೆ ಬಸವಣ್ಣನವರ ಸಮಾಜೋದ್ಧಾರ್ಮಿಕ ಕಾರ್ಯಕ್ಕೆ ಮಾರಕವಾಗದೇ ಪೂರಕವಾದರು. ಬಸವಣ್ಣನವರ ಕಾರ್ಯಕ್ಕೆ ಎಣ್ಣೆಯಾಗಿ, ಬತ್ತಿಯಾಗಿ ದುಡಿದರು.

ಬಸವಣ್ಣನವರು ಕಲ್ಯಾಣಕ್ಕೆ ಬಂದು ಮಹಾಮನೆ ಕಟ್ಟುತ್ತಾರೆ. ಮಹಾಮನೆಯಲ್ಲಿ ಬಸವಣ್ಣ ,ಅಕ್ಕನಾಗಮ್ಮ, ನೀಲಾಂಬಿಕೆ ಹಾಗೂ ಗಂಗಾಂಬಿಕೆ ಇರುತ್ತಾರೆ. ಇವರ ಮನೆಗೆ ಬಂದ ಎಲ್ಲಾ ಶರಣರನ್ನು ಗಂಗಾಂಬಿಕೆ ಉಪಚಾರ ಮಾಡುತ್ತಿದ್ದರು. ಬಂದವರು ಶಿವ ಚಿಂತನೆ ಮಾಡುವಾಗ ಷಟಸ್ಥಲ ಮತ್ತು ತ್ರಿಲಿಂಗದ ಸಕಲಗಳ



ಬಗ್ಗೆ, ಅಷ್ಟಾವರಣ ವಚನಗಳ ಬಗ್ಗೆ ಚರ್ಚೆ ಮಾಡುತ್ತಿದ್ದರು.

ಕಲ್ಯಾಣ ಕ್ರಾಂತಿಯಾದ ನಂತರ ನೀಲಾಂಬಿಕೆಯವರು ಸಂಗಮಕ್ಕೆ ತೆರಳಿದರು. ಬಿಜ್ಜಳನ ಕೊಲೆಯಾದ ನಂತರ ಗಂಗಾಂಬಿಕೆ ಶರಣರಿಗೆ ಮುಂದಾಳಾಗಿ ಶರಣರು ಮತ್ತು ವಚನ ಶಾಸ್ತ್ರದ ಉಳಿವಿಗಾಗಿ ಬಸವಕಲ್ಯಾಣದಲ್ಲಿ ಖಡ್ಗವನ್ನು ಹಿಡಿದು ವಚನಗಳನ್ನು ಬೆನ್ನಿಗೆ ಕಟ್ಟಿಕೊಂಡು ಹೋರಾಡುವಾಗ ಆಕಾಶದಲ್ಲಿ ಜಗಾಟೆ ಜಾಗರಿ ಓಂಕಾರನಾದ ಹೊರಗೆ ಬರುತ್ತಿತ್ತು, ಪಂಚ ಗಣಾಧೀಶರು ನಿಂತು ನೊಡ್ಯಾರ.

ಗಂಗಾಂಬಿಕೆಯ ಬದುಕಿನ ಕುರಿತು ‘ಶಿವತತ್ವ ಚಿಂತಾಮಣಿ’ಯಲ್ಲಿ ಲಕ್ಕಣ್ಣ ದಂಡೇಶ ಹೀಗೆ ಹೇಳುತ್ತಾನೆ, ‘ಗಂಗಾಂಬಿಕೆ, ತನು-ಮನವನೊಚ್ಚತಗೊಟ್ಟು ಬಸವರಾಜ ಚಿತ್ತದನುಗುಣವಾದ ಸತಿಯಾದಳು’ ಬಸವಣ್ಣನವರ ಚಿತ್ತದಲ್ಲಿ ಮನೆ ಮಾಡಿದ್ದ ಕಲ್ಯಾಣ ರಾಜ್ಯದ ಕನಸು ನನಸು ಮಾಡುವಲ್ಲಿ ಗಂಗಾಂಬಿಕೆಯವರು ತಮ್ಮ ಜೀವನ ಸಮರ್ಪಿಸಿದರು. ಅದಕ್ಕೆ ಶರಣಬಳಗವೆಲ್ಲ ಗಂಗಾಂಬಿಕೆಯವರನ್ನು ‘ಆಚಾರಪ್ರಾಣಿ’, ‘ಗುರುಪ್ರಾಣಿ’ ಎಂದು ಗೌರವಿಸಿತು.

ಜ್ಞಾನದ ಸಹಜ ನೆರಳಿನಂತೆ ಹಿಂಬಾಲಿಸುತ್ತದೆ’ ಎಂಬ ಬಲ್ಲವರ ನುಡಿಯಂತೆ ಬಸವಣ್ಣನವರ ಅಂತರಂಗದ ಅರಿವಿನ ಸ್ವರೂಪವಾಗಿದ್ದ ಕನಸುಗಳಿಗೆ ಸಾಕಾರಗೊಳಿಸುವಲ್ಲಿ ಗಂಗಾಂಬಿಕೆಯವರು ಎಲೆಮರೆಯ ಕಾಯಿಯಂತೆ ಕಾರ್ಯ ಮಾಡಿದರು. ಗಂಗಾಂಬಿಕೆ ತಾಯಿಯವರ ಜೀವನ ಕಾವೇರಿ ನದಿಯಂತೆ ಹರಿಯುತ್ತಾ ಹೊರಗೆ ತೋರಗೊಡದೆ ಅಂತರಂಗದ ಶಿವಯೋಗ ಸಾಧಕರಾಗಿ ಅನುಭಾವದ ಎತ್ತರಕ್ಕೆ ಬೆಳೆದು ಲಿಂಗದೇವನಿಗೆ ಸಮರ್ಪಿತವಾದ ಬದುಕು ಗಂಗಾಂಬಿಕೆಯವರದ್ದು.

**ವಚನ ದರ್ಶನ:**

ಗಂಗಾಂಬಿಕೆ ತಾಯಿಯವರು ಒಂದು ಲಕ್ಷದ ಎಂಟು ಸಾವಿರ ವಚನಗಳನ್ನು ಬರೆದಿದ್ದಾರೆ ಎಂದು ಸಿದ್ಧರಾಮೇಶ್ವರರು ತಮ್ಮ ಒಂದು ವಚನದಲ್ಲಿ ದಾಖಲಿಸಿದ್ದಾರೆ. ಆದರೆ ಅವರ ಕೇವಲ ಒಂಬತ್ತು ವಚನಗಳು ಮಾತ್ರ ಸಿಕ್ಕಿವೆ. ಸಿಕ್ಕ ಒಂಬತ್ತು ವಚನಗಳಲ್ಲಿ ಚಾರಿತ್ರಿಕ ದಾಖಲೆಗಳಿವೆ. ಬಸವಣ್ಣನವರ ತಾಯಿ-ತಂದೆಯ ಹೆಸರುಗಳು ಉಲ್ಲೇಖವಿದೆ. ಒಂದೊಂದು ವಚನಗಳು ಅನುಭಾವದ ರತ್ನದಂತೆ ಕಂಗೊಳಿಸುತ್ತವೆ. ಗಂಗಾಂಬಿಕೆಯವರ ಅಂತರಂಗದ ಸಾಧನೆ, ಯೋಗದ ನಿಲವು ವಚನಗಳಲ್ಲಿ ಮೂಡಿ ಬಂದಿದೆ. ‘ಸಾಂದ್ರವಾಗಿ ಹರಗಣ ಭಕ್ತಿಯ ಮಾಳ್ಪನೆಂತೊ, ಮಾದಲಾಂಬಿಕಾ ನಂದನನವು? ಸಾಂದ್ರವಾಗಿ ಬಿಜ್ಜಳನವರ ಮನೆಯ ನ್ಯಾಯ ನೊಳನೆಂತೊ ಮಾದರಸನ ಮೋಹದ ಮಗನು? ಸಾಂದ್ರವಾಗಿ ಲಿಂಗಾರ್ಚನೆ ಲಿಂಗತೃಪ್ತಿ ಅನುಗೆಯ್ವನೆಂತೊ ಗಂಗಾಪ್ರಿಯ ಕೂಡಲಸಂಗಮನ ಶರಣಚೆನ್ನ?’ ಗಂಗಾಂಬಿಕೆಯವರು ವಚನದಲ್ಲಿ ಚಾರಿತ್ರಿಕ ಹಾಗೂ ಬಸವಣ್ಣನವರ ಜಗದಗಲ ಕಾರ್ಯದ ದರ್ಶನ ಮಾಡಿಸಿದ್ದಾರೆ. ಸಾಂದ್ರ ಎಂದರೆ ದಟ್ಟ, ಉತ್ಕಟವಾದದು.

ಬಸವಣ್ಣನವರ ಹೃದಯದಲ್ಲಿ ಭಕ್ತಿಸಾಗರವೇ ಅಡಗಿತ್ತು. ಭಕ್ತಿ ಎಂದರೆ ಬಸವಣ್ಣ, ಬಸವಣ್ಣ ಎಂದರೆ ಭಕ್ತಿ. ಅದಕ್ಕೆ ಮಹಾಮನೆಗೆ ಬಂದವರೂ ಯಾರೂ ಮರಳಿ ಹೋಗುತ್ತಿರಲಿಲ್ಲ. ಬಂದವರೆಲ್ಲ ಅಮರಗಣಂಗಳಾಗುತ್ತಿದ್ದರು. ಒಂದು ಕಣವೂ ನಾನೂ ಮಾಡಿದೆ ಮಾಡುತ್ತಿರುವೆ ಎಂಬ ಭಾವ ಬಸವಣ್ಣನವರಲ್ಲಿ ಸುಳಿಯಲಿಲ್ಲ. ಅವರ ಸ್ವಭಾವಕ್ಕೆ ತಕ್ಕಂತೆ ವಿನಯದಿಂದ ವರ್ತಿಸಿ ಅವರ ಅಂತರಂಗದಲ್ಲಿ ಪ್ರೀತಿಯ ಝುರಿಯುಕ್ಕುವಂತೆ ಮಾಡುತ್ತಿದ್ದರು. ಇದುವೆ ಸಾಂದ್ರವಾಗಿ ಹರಗಣಭಕ್ತಿ. ಈ ವಚನದಲ್ಲಿ ಗಂಗಾಂಬಿಕೆ ಅವರು ಬಸವನ್ನನವರ ಬಾಹ್ಯಸಾಧನೆ, ಲೋಕಸೇವೆ, ಆಂತರಿಕ ಸಾಧನೆಯ ದರ್ಶನ ಮಾಡಿಸಿದ್ದಾರೆ. ಬಸವಣ್ಣನವರು ಬಿಜ್ಜಳನ ಮಹಾಮಂತ್ರಿಯಾಗಿ ತತ್ವನಿಷ್ಠೆ, ನೀತಿನಿಷ್ಠೆ, ನ್ಯಾಯನಿಷ್ಠೆಯಿಂದ ನಡೆದುಕೊಳ್ಳುವ ರೀತಿ ಗಂಗಾಂಬಿಕೆಯವರು ಸೂಕ್ಷ್ಮವಾಗಿ ಗಮನಿಸಿದ್ದಾರೆ. ಹೆಮ್ಮೆ ಪಟ್ಟಿದ್ದಾರೆ. ಬಸವಣ್ಣನವರ ಹೃದಯದಲ್ಲಿ ಪ್ರೀತಿಯ ಜೊತೆ, ನ್ಯಾಯ ನಿಷ್ಠೆ ತುಂಬಿಕೊಂಡಿತ್ತು. ಲೋಕವಿರೋಧಿ ಶರಣನಾರಿಗೂ ಅಂಜುವನಲ್ಲ. ಹರಳಯ್ಯ ಮಧುವರಸನ ಪ್ರಸಂಗದಲ್ಲಿ ಅನ್ಯಾಯವಾದಾಗ ಮಂತ್ರಿಸ್ಥಾನಕ್ಕೆ ತಿಲಾಂಜಲಿ ಕೊಟ್ಟರು. ರಾಜಾಧಿರಾಜನಾದ ಪರಮಾತ್ಮನೆ ಎಲ್ಲರಿಗೂ ಆಶ್ರಯವೇ ಹೊರತು ಬಿಜ್ಜಳನಲ್ಲ ಎಂಬ ಪ್ರಜ್ಞೆ ಸದಾ ಬಸವಣ್ಣನವರ ಹೃದಯದಲ್ಲಿತ್ತು ಎಂದು ಗಂಗಾಂಬಿಕೆಯವರು ಅರಿತ್ತಿದ್ದರು, ಅನುಭವಿಸಿದ್ದರು. ಅದಕ್ಕಾಗಿ ಎಂತಹ ಸಂದರ್ಭದಲ್ಲಿ ಗಂಗಾಂಬಿಕೆ ಅವರು ಧೈರ್ಯಗೆಡದೆ ಅಶಾಂತರಾಗದೆ, ಸಮಾಧಾನದಿಂದ ಬಂದ ಪರಿಸ್ಥಿತಿಯನ್ನು ಎದುರಿಸುವ ಮನೋಭಾವ ಹೊಂದಿದ್ದರು. ಅವರ ಈ ವ್ಯಕ್ತಿತ್ವದ ದರ್ಶನ ಕಲ್ಯಾಣದಲ್ಲಿ ನಡೆದ ಶರಣರ ಹತ್ಯಾಕಾಂಡ ಪ್ರಸಂಗದಲ್ಲಿ ಕಾಣಬರುತ್ತದೆ.

**ವಚನ ಸಾಹಿತ್ಯ ರಕ್ಷಣೆ:**

**ಅವಳ ಕಂದ ಬಾಲಸಂಗ, ನಿನ್ನ ಕಂದ ಚೆನ್ನಲಿಂಗ**
**ಎಂದು ಹೇಳಿದರಮ್ಮಾ ಎನ್ನ ಒಡೆಯರು.**
**ಫಲವಿಲ್ಲದ ಕಂದನಿರ್ಪನವಳಿಗೆ,**
**ಎನಗೆ ಫಲವಿಲ್ಲ, ಕಂದನಿಲ್ಲ.**
**ಇದೇನೋ ದುಃಖದಂದುಗ**
**ಗಂಗಾಪ್ರಿಯ ಕೂಡಲಸಂಗಮದೇವಾ ?**

ಕಲ್ಯಾಣದಲ್ಲಿ ಹತ್ಯಾಕಾಂಡ ನಡೆದಾಗ ಶರಣರಿಗೆಲ್ಲ ಮೊದಲು ಸವಾಲು ಎಂದರೆ ವಚನ ಸಾಹಿತ್ಯ ರಕ್ಷಣೆ.

ವಚನ ಸಾಹಿತ್ಯ ರಕ್ಷಣೆಗೆ ಗಂಗಾಬಿಕೆ ತಾಯಿಯವರ ಪಾತ್ರ ಬಹಳ ಮಹತ್ವದ್ದು. ಗಂಗಾಂಬಿಕೆ ತಾಯಿ ವಚನ ಸಾಹಿತ್ಯ ರಕ್ಷಣೆಗೆ ಮುಂದಾಗುತ್ತಾರೆ. ಕಲ್ಯಾಣದಿಂದ ಗುಪ್ತಮಾರ್ಗವಾಗಿ ಪಾರಾಗಿ ವೈರಿಗಳನ್ನು ಎದುರಿಸುತ್ತ ಕಾಸರವಳ್ಳಿ ತಲುಪುತ್ತಾರೆ. ಮಡಿವಾಳ ಮಾಚಿದೇವ, ಡೋಹಾರ ಕಕ್ಕಯ್ಯ, ಅಕ್ಕನಾಗಮ್ಮ ಮುಂತಾದ ಶರಣರು ಗಂಗಾಂಬಿಕೆ ತಾಯಿ ಜೊತೆ ಇರುತ್ತಾರೆ. ಅಲ್ಲಿ ಯುದ್ಧವಾಗುತ್ತದೆ. ಯುದ್ಧದಲ್ಲಿ ಗಂಗಾಂಬಿಕೆಯವರು ಗಾಯಗೊಳ್ಳುತ್ತಾರೆ. ಶರಣರು ಮತ್ತು ವಚನ ಶಾಸ್ತ್ರದೊಂದಿಗೆ ಕಾದಾರ ಹೊಳಿತನಕ, ಮುಕುಟ ಖಾನ ಹುಬ್ಬಳ್ಳಿ ಎಂಬ ಗ್ರಾಮದಲ್ಲಿ ಇಷ್ಟಲಿಂಗದಲ್ಲಿ ದೃಷ್ಟಿ ಇಟ್ಟಾಗ ಲಿಂಗೈಕ್ಯರಾದರು.

* * *



**ಲೇಖನ ಸಂಗ್ರಹ :**
**ಸಿದ್ಧಲಿಂಗ ಶಿವಯೋಗಿ ಸ್ವಾಮಿ**
**ಮಠಪತಿ ಉಚ್ಚ**
**ತಾ. ಭಾಲ್ಕಿ ಜಿ ಬೀದರ.**

# ಕುಮಟಗಿ ಕೆರೆಯಲ್ಲಿ ಮುಳುಗಿ ಇಬ್ಬರು ಯುವಕರ ಸಾವು



**ವಿಜಯಪುರ :** ಬಿಸಿಲಿನ ಬೇಗೆ ತಣಿಸಲು ಕೆರೆಗೆ ಇಳಿದ ಇಬ್ಬರು ಯುವಕರು ನೀರು ಪಾಲಾದ ದಾರುಣ ಘಟನೆ ವಿಜಯಪುರ ತಾಲೂಕಿನ ಕುಮಟಗಿ ಕೆರೆಯಲ್ಲಿ ಬುಧವಾರ ಮಧ್ಯಾಹ್ನ ಸಂಭವಿಸಿದೆ.

ಜಮಖಂಡಿ ನಿವಾಸಿ ಮಹ್ಮದಕೈಫ್ ನಿಸಾರಹ್ಮದ ಜಮಾದಾರ (19), ಯೋಗಾಪುರದ ಸೋಹೆಲ್ ಹತ್ತರಕಿಹಾಳ (25) ಮೃತಪಟ್ಟ ಯುವಕರು.

ಜಮಖಂಡಿಯಿಂದ ವಿಜಯಪುರದ ಯೋಗಾಪುರಕ್ಕೆ ಬಂದಿದ್ದ ಮಹ್ಮದಕೈಫ್ 5 ಜನ ಯುವಕರ ಜೊತೆಗೂಡಿ ಕುಮಟಗಿ ಕೆರೆಗೆ ತೆರಳಿದ್ದ. ಆಗ ಮಹ್ಮದಕೈಫ್ ನೀರಿನಲ್ಲಿ ಮುಳುಗಿ ತೀವ್ರ ಅಸ್ವಸ್ಥಗೊಂಡಿದ್ದ. ತಕ್ಷಣ ಆತನನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಚಿಕಿತ್ಸೆ ಫಲಿಸದೇ ಆತನು ಆಸ್ಪತ್ರೆಯಲ್ಲಿ ಅಸುನೀಗಿದ್ದಾನೆ. ಮಹ್ಮದಕೈಫ್ ಸೇರಿ 6 ಜನರು ಈಜಾಡಲು ಕುಮಟಗಿ ಕೆರೆಗೆ ತೆರಳಿದ್ದರು. ಈ ವೇಳೆ ಕೆರೆಯ ನೀರು ಆಳವಾಗಿದ್ದರಿಂದ ಗಾಬರಿಗೊಂಡು ಈಜಲಾಗದೆ ನಾಲ್ವರು ದಡ ಸೇರಿ ಪಾರಾಗಿದ್ದಾರೆ. ಇನ್ನೂ ಇಬ್ಬರು ಯುವಕರು ಸಾವು ಬದುಕಿನ ನಡುವೆ ಹೋರಾಟ ನಡೆಸಿದ್ದಾರೆ. ಆಗ ಸ್ಥಳೀಯರ ನೆರವಿನಿಂದ ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಮಹ್ಮದಕೈಫ್ ಎಂಬ ಯುವಕನನ್ನು ನೀರಿನಿಂದ ರಕ್ಷಿಸಿದ್ದಾರೆ. ಆದರೆ ಸೋಹೆಲ್ ಎಂಬ ಯುವಕನ ಶವ ಪತ್ತೆಯಾಗಿರಲಿಲ್ಲ. ಆತನ ಶವಕ್ಕಾಗಿ ತಡರಾತ್ರಿವರೆಗೆ ಶೋಧನೆ ಕಾರ್ಯ ಕೈಗೊಳ್ಳಲಾಗಿತ್ತು.

ರಾತ್ರಿ ಕತ್ತಲಾಗಿದ್ದರಿಂದಾಗಿ ಶೋಧನೆ ಕಾರ್ಯಕ್ಕೆ ತೊಂದರೆಯಾಯಿತು. ಹೀಗಾಗಿ ರಾತ್ರಿ ವೇಳೆಯಲ್ಲಿ ಶೋಧನೆ ಕಾರ್ಯ ಸ್ಥಗಿತಗೊಳಿಸಲಾಗಿತ್ತು. ಗುರುವಾರ ಬೆಳಗ್ಗೆ ಮತ್ತೆ ಯುವಕ ಸೋಹೆಲ್‌ನ ಶವದ ಶೋಧನೆ ಕಾರ್ಯ ಆರಂಭಿಸಲಾಗಿತ್ತು. ಬೆಳಗ್ಗೆ 10 ಗಂಟೆ ಸುಮಾರಿಗೆ ಸೋಹೆಲ್‌ನ ಶವ ಪತ್ತೆ ಹಚ್ಚುವಲ್ಲಿ ಅಗ್ನಿಶಾಮಕ ದಳ ಸಿಬ್ಬಂದಿ ಹಾಗೂ ಪೊಲೀಸರು ಯಶಸ್ವಿಯಾಗಿದ್ದಾರೆ.

ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

# ಶಿಕ್ಷಣಕ್ಕೆ ಜೋಳಿಗೆ ಹಿಡಿದ ಶ್ರೀಗಳು: ಎನ್.ಎ. ಬನಸೋಡೆ



**ಕೊಲ್ಹಾರ :** ಪಟ್ಟಣದಲ್ಲಿ ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ ಮಹಾಸ್ವಾಮಿಗಳ ಜಯಂತಿಯನ್ನು ಮಂಗಳವಾರ ಆಚರಿಸಲಾಯಿತು.

ಪಟ್ಟಣದಲ್ಲಿ ಶರಣ ಸಾಹಿತ್ಯ ಪರಿಷತ್ತಿನಿಂದ ಶ್ರೀ ಶಿವಕುಮಾರ ಮಹಾಸ್ವಾಮಿಗಳ ಜಯಂತಿ ಉದ್ದೇಶಿಸಿ ಶಿಕ್ಷಕ ಎನ್ ಎ ಬನಸೋಡೆ ಮಾತನಾಡಿ ತ್ರಿವಿಧ ದಾಸೋಹಕ್ಕೆ ಜೋಳಿಗೆ ಹಾಕಿಕೊಂಡು ಶಿಕ್ಷಣ,ವಸತಿ, ಆರೋಗ್ಯಕ್ಕೆ ಕೊಡುಗೆ ನೀಡಿದ ಮಠಗಳಲ್ಲಿ ಸಿದ್ದಗಂಗಾ ಮಠ ಸರ್ಕಾರ ಮಾಡದ ಕೆಲಸಮಾಡಿ ಅನಾಥ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಅವರ ಬದುಕು ಕಟ್ಟಿಕೊಳ್ಳಲು ಸಹಕಾರಿಯಾಗಿದೆ ಎಂದು ಶ್ರೀಗಳ ಕಾಯಕ ತತ್ವವನ್ನು ವಿವರಿಸಿ ಹೇಳಿದರು.

ಸಿದ್ದಗಂಗಾಮಠದಶ್ರೀಶಿವಕುಮಾರಮಹಾಸ್ವಾಮಿಗಳ ಬಗ್ಗೆ ಕವಯಿತ್ರಿಗಳಾದ ರುದ್ರಮ್ಮ ಗಿಡ್ಡಪ್ಪಗೋಳ, ಎಸ್ ಎಂ ಕೋರಿ ಕವನ ವಾಚನ ಮಾಡಿದರು.

ಅಧ್ಯಕ್ಷತೆ ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ ಎಸ್ ಬಾಲಗೊಂಡ, ಅತಿಥಿಗಳಾಗಿ ಮುಖ್ಯ ಶಿಕ್ಷಕಿ ಕೆ ಆರ್ ದಾಸರ, ಉಪಾಧ್ಯಕ್ಷರು ಗಳಾದ ಗಂಗಾಧರ ಏಳಗಂಟಿ,ಆರ್ ಎಚ್ ನಾವಿ, ಕಾರ್ಯದರ್ಶಿ ಗಂಗಾಧರ ಆಸಂಗಿ,ಐ ಬಿ ಹಾದಿಮನಿ,ಐ ಸಿ ಪಾಟೀಲ, ಆರ್ ಎಸ್ ಜತ್ತಿ, ಎಸ್ ಎಂ ಬಾಟಿ ಉಪಸ್ಥಿತರಿದ್ದರು.

# ಯತ್ನಾಳರ ಎತ್ತಂಗಡಿ ಸೂಕ್ತ: ಪಕ್ಷಕ್ಕೆ ಹಾನಿ ಇಲ್ಲ: ರಾಜು ಬಿರಾದಾರ

ವರದಿ: ಲಾಲಸಾಬ ಸವಾರಗೋಳ.

**ವಿಜಯಪುರ :** ಶಾಸಕ ಬಸನಗೌಡ ಪಾಟೀಲ ಯತ್ನಾಳರನ್ನು ಉಚ್ಚಾಟಿಸುವ ಮೂಲಕ ಬಿಜೆಪಿ ಹೈಕಮಾಂಡ್ ತಡವಾಗಿಯಾದರೂ ಯೋಗ್ಯ ನಿರ್ಣಯ ಕೈಗೊಂಡಿದೆ. ಆ ಮೂಲಕ ಹೊಂದಾಣಿಕೆ ರಾಜಕಾರಣಕ್ಕೆ ಬ್ರೇಕ್ ಹಾಕಿದೆ. ಬಿಜೆಪಿಗೆ ಯಾವುದೇ ರೀತಿಯಲ್ಲಿಉಪಯೋಗವಿಲ್ಲದಯತ್ನಾಳರ ಉಚ್ಚಾಟನೆಯಿಂದ ಪಕ್ಷಕ್ಕೆ ಯಾವುದೇ ಹಾನಿಯೂ ಇಲ್ಲ ಎಂದು ನಗರಸಭೆ ಮಾಜಿ ಸದಸ್ಯ ರವಿಕಾಂತ ಬಗಲಿ ಹಾಗೂ ಮುಖಂಡ ರಾಜು ಬಿರಾದಾರ ತಿಳಿಸಿದರು.

ಸ್ವಾರ್ಥ ರಾಜಕಾರಣಕ್ಕಾಗಿ ಪಕ್ಷವನ್ನೇ ಬಲಿ ಕೊಡುತ್ತಿದ್ದ ಯತ್ನಾಳರು ಕಾಂಗ್ರೆಸ್ ನಾಯಕರೊಂದಿಗೆ ಹೊಂದಾಣಿಕೆ ಮಾಡಿಕೊಂಡು ಬಿಜೆಪಿಯನ್ನು ಸೋಲಿಸಿದ ಅನೇಕ ಉದಾಹರಣೆಗಳಿವೆ. ಬಬಲೇಶ್ವರ ಕ್ಷೇತ್ರದಲ್ಲಿ ತಮ್ಮದೇ ಪಕ್ಷ ಹಾಗೂ ಜಾತಿಯ ವಿಜುಗೌಡ ಪಾಟೀಲರ ಸೋಲಿನ ಹಿಂದೆ ಯತ್ನಾಳರ ಕೈವಾಡವಿದೆ ಎಂಬುದು ಇದೀಗ ಅವರದ್ದೇ ಹೇಳಿಕೆಗಳಿಂದ ಬಹಿರಂಗಗೊಂಡಿದೆ ಎಂದು ಬುಧವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.



ಸದ್ಯ ಯತ್ನಾಳರ ಉಚ್ಚಾಟನೆ ಖಂಡಿಸಿ ಪ್ರತಿಭಟನೆ ಮಾಡುತ್ತಿರುವವರು ಕೇವಲ ಅವರಚೇಲಾಗಳುಮಾತ್ರ.ಯತ್ನಾಳರಿಂದಾಗಿ ಪಕ್ಷದಿಂದ ದೂರ ಉಳಿದಿದ್ದವರೆಲ್ಲರೂ ಇದೀಗ ಮರಳಿ ಪಕ್ಷದತ್ತ ಮುಖ ಮಾಡುತ್ತಿದ್ದಾರೆ. ಈಗ ಯತ್ನಾಳ ಉಚ್ಚಾಟನೆ ನಂತರ ಪಕ್ಷವು ಬಕೆಟ್ಗಳ, ಆಟೋ ರಿಕ್ಷಾ, ಕುಕ್ಕರ್ಗಳ ಪಕ್ಷವಾಗಿದೆ ಎಂದು ಯತ್ನಾಳ ಹಿಂಬಾಲಕರು ಲೇವಡಿ ಮಾಡುತ್ತಿದ್ದಾರೆ. ಹರಕು ಬಾಯಿಯಿಂದಾಗಿಯೇ ಯತ್ನಾಳ ಪಕ್ಷದಿಂದ ಉಚ್ಚಾಟನೆಗೊಂಡಿದ್ದಾರೆ. ಇನ್ನಾದರೂ ಅವರ ಹಿಂಬಾಲಕರು ಇದನ್ನು ಅರ್ಥಮಾಡಿಕೊಂಡು ಬಿಜೆಪಿ ಮತ್ತು ಹೈಕಮಾಂಡ್ ಕುರಿತ ಟೀಕೆ-ಟಿಪ್ಪಣಿ, ಅವಾಚ್ಯ ಪದಬಳಕೆ, ನಿಂದನೆ ನಿಲ್ಲಿಸದೇ ಹೋದರೆ ಅವರದ್ದೇ ಭಾಷೆಯಲ್ಲಿ ಉತ್ತರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಯಡಿಯೂರಪ್ಪನವರು ಉಚ್ಚಾಟನೆ ಮಾಡಿದ್ದಾರೆಂದುಯತ್ನಾಳದೂರುತ್ತಿದ್ದಾರೆ. ಆದರೆ, ಯಡಿಯೂರಪ್ಪನವರೇ ಟಿಕೆಟ್ ಕೊಟ್ಟು ಯತ್ನಾಳ ಅವರನ್ನು ಬೆಂಬಲಿಸಿದ್ದರು. ಈ ಹಿಂದೆ ಬಿಜೆಪಿ ಅಧಿಕೃತ ಅಭ್ಯರ್ಥಿ ಅಪ್ಪಾಸಾಹೇಬ ಪಟ್ಟಣಶೆಟ್ಟಿ ಅವರನ್ನು ಸೋಲಿಸಲು ಇದೇ ಯತ್ನಾಳ ಪ್ರಯತ್ನಿಸಿದ್ದರು. ಮುಸ್ಲಿಂರನ್ನು ವಿರೋಧಿಸುವ ಯತ್ನಾಳ ಜೆಡಿಎಸ್ ನಲ್ಲಿದ್ದಾಗ ಮುಸ್ಲಿಂರ ಪರವಾಗಿರುವುದನ್ನು ಮರೆತಿದ್ದಾರೆ. ಈಗ ಮೂರನೇ ಬಾರಿ ಉಚ್ಚಾಟನೆ ಮಾಡಲಾಗಿದ್ದು, ಯಾವುದಕ್ಕೂ ಸ್ಥಿರವಾಗಿಲ್ಲ. ತಮಗೆ ಬೇಕಾದಾಗ ಪಂಚಮಸಾಲಿ ಕಾಡ9 ತೋರಿಸುತ್ತಾರೆ. ಸಕ9ಸ್ ನಲ್ಲಿನ ಜೋಕರ್ ಪಾತ್ರಧಾರಿಯಾಗಿದ್ದಾರೆ.

ಬಣಜಿಗ, ಕುರುಬ, ಜಂಗಮ, ಬ್ರಾಹ್ಮಣರು, ಶೆಟ್ಟಿ ಸಮಾಜದವರು ಹೀಗೆ ಎಲ್ಲರನ್ನೂ ಟೀಕೆ ಮಾಡಿದ್ದಾರೆ. ಹೀಗಾಗಿ ಯತ್ನಾಳ ಉಚ್ಚಾಟನೆ ಮಾಡಿದ್ದು, ಯೋಗ್ಯವಾದ ನಿರ್ಧಾರವಾಗಿದೆ ಎಂದರು.

ಯತ್ನಾಳರಿಗೆ ತಾಕತ್ತಿದ್ದರೆ ಸ್ವಂತ ಪಕ್ಷ ಕಟ್ಟಲಿ. ಅದನ್ನು ಬಿಟ್ಟು ಹಿಂಬಾಲಕರ ಮೂಲಕ ಮರಳಿ ಬಿಜೆಪಿಗೆ ಸೇರ್ಪಡೆ ಮಾಡಿಕೊಳ್ಳಿ ಎಂದು ಪ್ರತಿಭಟನೆ ಮಾಡಿಸುತ್ತಿರುವುದು ಶೋಭೆಯಲ್ಲ ಎಂದರು.

ಮುಖಂಡರಾದ ಬಸವರಾಜ ಹಳ್ಳಿ, ಚನ್ನು ಚಿನಗುಂಡಿ ಮತ್ತಿತರರು ಉಪಸ್ಥಿತರಿದ್ದರು.

# ಶುದ್ಧ ನೀರಿನ ಘಟಕಗಳಿಗೆ ಬೇಕಿದೆ ಚಿಕಿತ್ಸೆ

**ಕೊಲ್ಹಾರ :** ಪಟ್ಟಣ ಪಂಚಾಯಿತಿಯಲ್ಲಿ ಇರುವ ಶುದ್ಧ ಕುಡಿಯುವ ನೀರಿನ ಘಟಕ ಕೆಟ್ಟು ಹೋಗಿದ್ದು ಪಟ್ಟಣ ಪಂಚಾಯಿತಿ ಅಧಿಕಾರಿಗಳು ದುರಸ್ತಿಪಡಿಸುವಲ್ಲಿ ವಿಫಲರಾಗಿದ್ದು, ಖಾಸಗಿ ಯವರಿಂದ ಹೆಚ್ಚಿನ ಹಣ ನೀಡಿ ಶುದ್ಧ ಕುಡಿಯುವ ನೀರು ಖರೀದಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಪಟ್ಟಣ ಪಂಚಾಯಿತಿ ಸದಸ್ಯ ನಿಂಗಪ್ಪ ಗಣಿ ಆರೋಪಿಸಿದ್ದಾರೆ.

ಶುದ್ಧವಾದ ಕುಡಿಯುವ ನೀರಿನ ಘಟಕದ ಬಳಿಕವಾದರೂ ಶುದ್ಧ ಕುಡಿಯುವ ನೀರು ದೊರೆಯಲಿದೆ ಎಂದು ಸಾರ್ವಜನಿಕರು ನೆಮ್ಮದಿಯ ನಿಟ್ಟುಸಿರುಬಿಟ್ಟಿದ್ದರು. ಅಶುದ್ಧ ಹಾಗೂ ಫ್ಲೋ?ಲೀರೇಡ್ ಯುಕ್ತ ನೀರು ಕುಡಿದು ಜನರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತಿದ್ದ ಹಿನ್ನೆಲೆಯಲ್ಲಿ ಸಾಕಷ್ಟು ಕಡೆಗಳಲ್ಲಿ



ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಿ ಈ ಮೂಲಕ ಜನರಿಗೆ ಉತ್ತಮ ಗುಣಮಟ್ಟದ ಕುಡಿಯುವ ನೀರು ಒದಗಿಸುವ ಸರ್ಕಾರದ ಯೋಜನೆ ಸಾಕಷ್ಟು ಅನುಕೂಲ ಕಲ್ಪಿಸಿದೆ. ಆದರೆ ಆ ಘಟಕಗಳು ಸರಿಯಾಗಿ ಕಾರ್ಯನಿರ್ವಹಿಸದೇ ಇರುವ ಪರಿಣಾಮ ಬಹುತೇಕ ಕಡೆಗಳಲ್ಲಿ ನೆಪಕ್ಕೆ ಮಾತ್ರ ಎನ್ನುವಂತಾಗಿದೆ.

ಆದರೆ ನಿರ್ವಹಣೆ ಹೊಣೆ ಹೊತ್ತಿರುವ ಪಟ್ಟಣ ಪಂಚಾಯಿತಿ ಸಿಬ್ಬಂದಿ ಬೇಜವಾಬ್ದಾರಿತನದಿಂದ ನೀರಿನ ಘಟಕ ಪದೇ ಪದೆ ಮತ್ತೆ ಕೆಟ್ಟು ಹೋಗಿದ್ದು, ಸಾರ್ವಜನಿಕರು ಖಾಸಗಿ ಶುದ್ಧ ಕುಡಿಯುವ ನೀರಿನ ಘಟಕದ ಮೊರೆ ಹೋಗುವಂತಾಗಿದೆ. ಈಗಾಗಲೇ ನೀರಿನ ಘಟಕ ಕೆಟ್ಟು ಒಂದು ವರ್ಷ ಕಳೆಯುತ್ತಿದ್ದು, ದುರಸ್ತಿಪಡಿಸದೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಆರೋಪಿಸಿದ್ದರು.

ದಿನದ 24 ಗಂಟೆಯೂ ಸಾರ್ವಜನಿಕರ ಸೇವೆಗೆ ಲಭ್ಯವಿರಬೇಕಾದ ಶುದ್ಧ ಕುಡಿಯುವ ನೀರಿನ ಘಟಕದ ನಿರ್ವಹಣೆ ಜವಾಬ್ದಾರಿ ಹೊತ್ತಿರುವ ಸಿಬ್ಬಂದಿ ಸರಿಯಾಗಿ ಕಾಲ ಕಾಲಕ್ಕೆ ದುರಸ್ತಿ ಮಾಡುತ್ತಿಲ. ಈ ಬಗ್ಗೆ ಗಮನಹರಿಸದೇ ನಿರ್ಲಕ್ಷ್ಯವಹಿಸುತ್ತಿರುವ ಅಧಿಕಾರಿ ವೃಂದದ ಬಗ್ಗೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಶುದ್ಧ ಕುಡಿಯುವ ನೀರಿನ ಘಟಕದಲ್ಲಿ 5 ರೂ.ಗೆ 20 ಲೀಟರ್ ನೀರು ದೊರೆತರೆ,

ಖಾಸಗಿ ಘಟಕಗಳಲ್ಲಿ 20 ಲೀಟರ್ ನೀರು ಪಡೆಯಲು10 ರಿಂದ 40 ರೂ. ನೀಡಬೇಕಿದೆ.

ಕೆಟ್ಟು ಹೋಗಿ ಹಲವು ತಿಂಗಳು ಕಳೆದಿದ್ದರೂ ದುರಸ್ತಿಪಡಿಸುವ ಬಗ್ಗೆ ಗಮನನೀಡಿದ ನಿರ್ಲಕ್ಷ್ಯ ದೋರಣೆ ಮಾಡುತ್ತಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಮೇಲಾಧಿಕಾರಿಗಳು ತಕ್ಷಣ ಕುಡಿಯುವ ನೀರು ಪೂರೈಕೆ ಮಾಡುವ ಬಗ್ಗೆ ಕ್ರಮವಹಿಸಬೇಕೆಂದು ಸಾರ್ವಜನಿಕರ ಒತ್ತಾಯವಾಗಿದೆ

**ಸಾರ್ವಜನಿಕರ ಅಳಲು**

ಪಟ್ಟಣದಲ್ಲಿ ಶುದ್ಧ ಕುಡಿವ ನೀರಿನ ಘಟಕ ಸರಕಾರದಿಂದ ನಿರ್ಮಾಣ ಮಾಡಿದ್ದರೂ ಜನಸಾಮಾನ್ಯರಿಗೆ ಯಾವುದೇ ರೀತಿ ಪ್ರಯೋಜನಕ್ಕೆ ಬರುತ್ತಿಲ್ಲವೆಂದು ಸಾರ್ವಜನಿಕರು ಸಂಜೆವಾಣಿ ಪತ್ರಿಕೆಯಲ್ಲಿ ಅಳಲು ತೋಡಿಕೊಂಡಿದ್ದಾರೆ.

**ಪಟ್ಟಣ ಪಂಚಾಯತಿ ಸದಸ್ಯನಿಂದ ಆರೋಪ:**

ನೀರಿಗಾಗಿ ಅಲೆದಾಡುವ ಸ್ಥಿತಿ ಬಂದೊದಗಿದೆ. ನೀರಿನ ಘಟಕವನ್ನು ದುರಸ್ತಿ ಸಾರ್ವಜನಿಕರಿಗೆ ಅನುಕೂಲ ಮಾಡಬೇಕಿದೆ. ಲಕ್ಷಾಂತರ ರೂ. ವೆಚ್ಚ ಮಾಡಿ ನಿರ್ಮಿಸಿರುವ ಘಟಕದ ಯಂತ್ರೋಪಕರಣಗಳು ತುಕ್ಕು ಹಿಡಿಯುತ್ತಿದ್ದರೂ ಸಂಬಂಧಿಸಿದ ಅಧಿಕಾರಿಗಳು ಕ್ರಮ ಕೈಗೊಳ್ಳದಿರುವುದು ವಿಪರ್ಯಾಸದ ಸಂಗತಿಯಾಗಿದೆ.

ಪ.ಪಂ ಸದಸ್ಯ ನಿಂಗಪ್ಪ ಗಣಿ

# ಆರೋಗ್ಯ ಟಿಪ್ಸ್: ಅಜೀರ್ಣ ಸಮಸ್ಯೆ ಕಾಡುತ್ತಿದೆಯೇ ಇಲ್ಲಿದೆ..ಮನೆಮದ್ದು ಪರಿಹಾರ



ಜೀವನ ವಿಧಾನದ ಬದಲಾವಣೆಯಿಂದ ಅಕಾಲಿಕವಾದ ಆಹಾರಕ್ರಮ, ಅಹಿತವಾದ ಆಹಾರ ಸೇವನೆ, ಮಲ ಮೂತ್ರ ತಡೆಗಟ್ಟುವಿಕೆ, ನಿಯಮಿತ ಪ್ರಮಾಣದ ಆಹಾರಕ್ಕಿಂತ ಅಧಿಕವಾದ ಆಹಾರವನ್ನು ಸೇವನೆ ಮಾಡುವುದು, ರಾತ್ರಿ ವೇಳೆ ನಿದ್ರೆ ಮಾಡದಿರುವುದು, ಅತ್ಯಂತ ಕಡಿಮೆ ಸಮಯ ನಿದ್ರೆ ಮಾಡುವುದು, ದುಷ್ಚಟಗಳನ್ನು ಹೊಂದುವುದರಿಂದ ಅಜೀರ್ಣದ ಸಮಸ್ಯೆ ಕಂಡುಬರುತ್ತದೆ.

ಇತ್ತೀಚಿನ ದಿನಗಳಲ್ಲಿ ಈ ಸಮಸ್ಯೆ ಹಲವರನ್ನು ಬಾಧಿಸುತ್ತಿದ್ದು, ಈ ಸಮಸ್ಯೆಯಿಂದ ಮುಕ್ತವಾಗಲು ಹಲವಾರು ಔಷಧಿಗಳ ಮೊರೆ ಹೋಗಬೇಕಾಗಿದೆ.

ಅಸಿಡಿಟಿ ಸಮಸ್ಯೆಗೆ ಮೂಲ ಕಾರಣವೇ ಇದಾಗಿದ್ದು, ಹೊಟ್ಟೆಯಲ್ಲಿ ಉರಿಯ ಅನುಭವ ಸೇರಿದಂತೆ ಹಲವಾರು ಸಮಸ್ಯೆಗಳಿಗೆಇದುಎಡೆಮಾಡಿಕೊಡುತ್ತದೆ.ತಾತ್ಕಾಲಿಕವಾದ ಅಜೀರ್ಣದ ಸಮಸ್ಯೆಗೆ ಉಪವಾಸ ಮಾಡುವುದು ಹಾಗೂ ಸೀಮಿತ ಚಿಕಿತ್ಸಾ ವಿಧಾನಗಳಿಂದ ಪರಿಣಾಮಕಾರಿ ಪರಿಹಾರವನ್ನು ಕಂಡುಕೊಳ್ಳಬಹುದಾಗಿದೆ. ಒಂದು ವೇಳೆ ಈ ಸಮಸ್ಯೆ ದೀರ್ಘ ಕಾಲದ್ದಾಗಿದ್ದರೆ, ವಾರಕ್ಕೆ ಒಂದು ಬಾರಿ ಉಪವಾಸ ಮಾಡುವುದು, ಆಹಾರ ಕ್ರಮಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವುದರಿಂದ ಸಮಸ್ಯೆಯನ್ನು ಗುಣಪಡಿಸಿಕೊಳ್ಳಬಹುದಾಗಿದೆ. ಇದಿಷ್ಟೇ ಅಲ್ಲದೆ ಪ್ರತಿನಿತ್ಯ, ಯೋಗಾಸನ, ಪ್ರಾಣಾಯಾಮ, ಸೂರ್ಯನಮಸ್ಕಾರವನ್ನು ಮಾಡುವುದರಿಂದ ಸಮಸ್ಯೆಯಿಂದ ದೂರವಿರಬಹುದಾಗಿದೆ. ಅಜೀರ್ಣದ ಸಮಸ್ಯೆಗೆ ಸಾಮಾನ್ಯ ಚಿಕಿತ್ಸೆಗಳು

ನಮ್ಮನ್ನು ಬಾಧಿಸುವ ಅಜೀರ್ಣದ ಸಮಸ್ಯೆಗೆ ನಮ್ಮ ಸುತ್ತಮುತ್ತಲಿನ ವಸ್ತುಗಳಿಂದ ಪರಿಹಾರವನ್ನು ಕಂಡುಕೊಳ್ಳಬಹುದಾಗಿದೆ. ನುಣ್ಣಗೆ ಪುಡಿ ಮಾಡಿ ಶುಭ್ರವಾದ ಬಟ್ಟೆಯಿಂದಗಾಳಿಸಿದಅಜವಾನದಪುಡಿ(ಓಂಕಾಳು)ಅನ್ನು ಒಂದು ವಾರ ಪ್ರತಿನಿತ್ಯ ಬಿಸಿನೀರಿನಲ್ಲಿ 1 ಗ್ರಾಂ ಬೆರೆಸಿ ಸೇವಿಸಿದರೆ ಅಜೀರ್ಣದ ಸಮಸ್ಯೆಯಿಂದ ಮುಕ್ತವಾಗಬಹುದಾಗಿದೆ. ಆದರೆ ಓಂಕಾಳು ಸೇವನೆ ದೇಹದಲ್ಲಿ ಉಷ್ಣದ ಅಂಶವನ್ನು ಹೆಚ್ಚಿಸುವುದರಿಂದ ಹೆಚ್ಚು ನೀರನ್ನು ಸೇವಿಸಬೇಕು.

ಹುಳಿಯಾಗದ ಮಜ್ಜಿಗೆಯನ್ನು ಸೇವಿಸುವುದರಿಂದ ಹಾಗೂ ಸೊಪ್ಪು ತರಕಾರಿಗಳನ್ನು ಸೇವನೆ ಮಾಡುವುದು ಮತ್ತು ಕಡಿಮೆ ಖಾರವನ್ನು ಸೇವನೆ ಮಾಡುವುದು ಉತ್ತಮ. ಇನ್ನು ಜೀರಿಗೆ ದನಿಯಾ ಕಷಾಯ, ಲಿಂಬೆರಸ ,ಸೇವನೆಯನ್ನು ಮಾಡುವುದರಿಂದಲೂ ಅಜೀರ್ಣದ ಸಮಸ್ಯೆಯಿಂದ ಪರಿಹಾರವನ್ನು ಕಂಡುಕೊಳ್ಳಬಹುದಾಗಿದೆ.

# ಜಗತ್ತಿನಾದ್ಯಂತ ಗರ್ಭಾವಸ್ಥೆ, ಹೆರಿಗೆ ಸಮಯದಲ್ಲಿ ಪ್ರತಿ 2ನಿಮಿಷಗಳಿಗೊಮ್ಮೆ ಮಹಿಳೆ ಸಾವು : ವರದಿ

ವಾಷಿಂಗ್ಟನ್: ಯುನೈಟೆಡ್ ನೇಷನ್ಸ್ ಏಜೆನ್ಸಿ ನೂತನವಾಗಿ ಬಿಡುಗಡೆ ಮಾಡಿರುವ ಅಂಕಿ-ಅಂಶದ ಪ್ರಕಾರ, ಪ್ರತಿ ಎರಡು ನಿಮಿಷಗಳಿಗೊಮ್ಮೆ ಮಹಿಳೆ ಗರ್ಭಾವಸ್ಥೆಯಲ್ಲಿ ಅಥವಾ ಹೆರಿಗೆ ವೇಳೆ ಸಾವನ್ನಪ್ಪುತ್ತಾರೆ ಎಂದು ತಿಳಿಸಿದೆ.ಈ ವರದಿ ಗರ್ಭಿಣಿ ಮಹಿಳೆಯರ ಸಾವಿನ ಅಂಕಿ-ಅಂಶವನ್ನು ಬಹಿರಂಗಪಡಿಸುವ ಮೂಲಕ ಇತ್ತೀಚೆಗಿನ

ವರ್ಷಗಳಲ್ಲಿನ ಮಹಿಳೆಯರ ಆರೋಗ್ಯದ ಕುರಿತ ಎಚ್ಚರಿಕೆಯ ಕರೆಗಂಟೆಯಾಗಿದೆ ಎಂದು ವರದಿ ಹೇಳಿದೆ.

ಜಗತ್ತಿನ ಬಹುತೇಕ ಎಲ್ಲಾ ಪ್ರದೇಶಗಳಲ್ಲಿಯೂ ಹೆರಿಗೆ ಸಂದರ್ಭದಲ್ಲಿನ ಸಾವಿನ ಸಂಖ್ಯೆ ಹೆಚ್ಚಳವಾಗುತ್ತಿದೆ. ಅಂಕಿಅಂಶದ ಬಹಿರಂಗದ ಹಿನ್ನೆಲೆಯಲ್ಲಿ ಪ್ರತಿಯೊಬ್ಬ ಮಹಿಳೆಗೂ



ಗರ್ಭಧಾರಣೆ ಮೊದಲೇ ಉತ್ತಮ ಆರೋಗ್ಯ ಸೌಲಭ್ಯ ಲಭ್ಯವಾಗಬೇಕಾಗಿದೆ ಎಂದು ವರದಿ ತಿಳಿಸಿದೆ.

ಪ್ರಾದೇಶಿಕ, ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯವಾಗಿ 2000ನೇ ಇಸವಿಯಿಂದ 2020ರವರೆಗೆ ಈ ವರದಿಯಲ್ಲಿ ಸಾವಿನ ಅಂಕಿಅಂಶ ನೀಡಲಾಗಿದೆ.

2020ರಲ್ಲಿ ಜಗತ್ತಿನಾದ್ಯಂತ ಅಂದಾಜು 2,87,000 ಗರ್ಭಿಣಿಯರು ಸಾವನ್ನಪ್ಪಿದ್ದಾರೆ. 2016ರಲ್ಲಿ 3,09,000 ಗರ್ಭಿಣಿಯರು ಜಗತ್ತಿನಾದ್ಯಂತ ಕೊನೆಯುಸಿರೆಳೆದಿದ್ದಾರೆ ಎಂದು ವರದಿ ವಿವರಿಸಿದೆ.

ಮಗುವಿಗೆ ಜನ್ಮನೀಡುವ ವೇಳೆ ಜಗತ್ತಿನಯಾವತಾಯಂದಿರಲ್ಲೂ ಭಯ ಕಾಣಿಸಿಕೊಳ್ಳಬಾರದು. ಪ್ರತಿಯೊಬ್ಬ ತಾಯಿಗೂ ಉತ್ತಮ ಆರೋಗ್ಯಸೇವೆಲಭ್ಯವಾಗಬೇಕು. ಇತ್ತೀಚೆಗೆ ಅತ್ಯಾಧುನಿಕ ವೈದ್ಯಕೀಯ ತಂತ್ರಜ್ಞಾನ ಇರುವ ಸಂದರ್ಭದಲ್ಲಿ ಸುರಕ್ಷಿತ ಹೆರಿಗೆ ಮತ್ತು ಉತ್ತಮ ಆರೋಗ್ಯಕ್ಕೆ ಹೆಚ್ಚಿನ ಒತ್ತು ನೀಡಬೇಕಾದ ಅಗತ್ಯ ಇದ್ದಿರುವುದಾಗಿ ವರದಿ ತಿಳಿಸಿದೆ.

# ಸ್ವಲೀನತೆಯಿರುವ ಮಕ್ಕಳಲ್ಲಿ ಕಂಡು ಬರುವ ಮಾನಸಿಕ ಲಕ್ಷಣಗಳು

ಇತ್ತೀಚಿನ ದಿನಗಳಲ್ಲಿ ಹಲವಾರು ರೀತಿಯ ದೈಹಿಕ ಹಾಗೂ ಮಾನಸಿಕ ಕಾಯಿಲೆಗಳ ಬಗ್ಗೆ ಚರ್ಚೆ ಆಗುತ್ತಿದೆ. ಅದರಲ್ಲಿಯೂ ಕೋವಿಡ್ ಮಹಾಮಾರಿ ಪ್ರಪಂಚವನ್ನೇ ನಲುಗಿಸಿದ ಮೇಲೆಮತ್ತಷ್ಟುಜನಸಾಮಾನ್ಯರಲ್ಲಿಆರೋಗ್ಯದ ಬಗ್ಗೆ ಕಾಳಜಿ, ಒಲವು ಹೆಚ್ಚಿದೆ ಎಂದರೆ ತಪ್ಪಲ್ಲ ಹೇಗೆ ಕೋವಿಡ್ ? 19 ಮಹಾಮಾರಿ ಸಮಸ್ಯೆ ನಿಗೂಢವಾಗಿದೆಯೋ ಅಷ್ಟೇ ನಿಗೂಢ ಈ ಆಟಿಸಂ ಅಥವಾ ಸ್ವಲೀನತೆ ಎಂದರೆ ತಪ್ಪಲ್ಲ. ಯಾಕೆಂದರೆ ಈ ಸಮಸ್ಯೆಯು ಕೂಡ ಅಷ್ಟೇ ಜಟಿಲವಾದದ್ದು.

ಪ್ರತೀ ವರ್ಷ ಎಪ್ರಿಲ್ 2ರಂದು ನಾವು ವಿಶ್ವ ಆಟಿಸಂ ದಿನವಾಗಿ ಆಚರಿಸುತ್ತಾ ಬಂದಿದ್ದೇವೆ. ಈ ಸಮಸ್ಯೆಯಿಂದ ಬಳಲುವವರನ್ನು ಗುರುತಿಸಬೇಕಾದರೆ ಕೆಲವೊಂದು ಗುಣಲಕ್ಷಣಗಳನ್ನು ಗಮನಿಸಬಹುದು. ಈ ಸ್ವಲೀನತೆ ಇರುವವರಲ್ಲಿ ಸಾಮಾನ್ಯವಾಗಿ ಸಾಮಾಜಿಕವಾಗಿ ತೊಡಗಿಸಿಕೊಳ್ಳಲು ಆಗದೇ ಇರುವುದು, ಹಾಗೆ ಸಂವಹನ ವಿಚಾರವಾಗಿ ಸಮಸ್ಯೆಗಳು ಅಂದರೆ, ಅವರಿಗೆ ಭಾಷೆ ಬೆಳವಣಿಗೆ ವಯಸ್ಸಿಗೆ ತಕ್ಕಂತೆ ಆಗದೇ ಇರುವುದು, ನರಗಳ ಬೆಳವಣಿಗೆ ಅಥವಾ ನ್ಯೂನತೆ ಕಂಡುಬರುವುದು. ಇವುಗಳೊಟ್ಟಿಗೆ ಕೆಲವೊಮ್ಮೆ ವರ್ತನೆಯ ಸಮಸ್ಯೆಗಳು ಕೂಡ ಇರಬಹುದು. ಕೆಲವೊಮ್ಮೆ ಪದೇ, ಪದೇ ಹೇಳಿದ ಪದವನ್ನು ಪುನರಾವರ್ತಿತ ಮಾಡುವುದು. ಹಾಗೆಯೇ ಕೆಲವೊಂದು ವಿಚಾರಗಳಲ್ಲಿ ವಿಶೇಷ ಆಸಕ್ತಿಗಳು ಎಂದರೆ ಸಾಮಾನ್ಯವಾಗಿ ತಿರುಗುತ್ತಿರುವ ಗಾಡಿಗಳ ಚಕ್ರಗಳನ್ನೇ ದಿಟ್ಟಿಸಿ ನೋಡುವುದು ಅಥವಾ ಯಾವುದೇ ವಸ್ತುವನ್ನು ಅದರ ಪದರಗಳನ್ನು ಸ್ಪರ್ಷಿಸಿ ನೋಡುವುದು, ಆದಷ್ಟೇ ಅಲ್ಲದೇ ಅತಿಯಾದ ಶಬ್ಧಗಳಿಗೆ ಚೀರುವುದು ಅಥವಾ ಪರಿಸರದಲ್ಲಿ ಹೊಂದಿಕೊಳ್ಳಲು ತೊಂದರೆಯಾಗಬಹುದು.



ಸ್ವಲೀನತೆಯಿಂದ ಕೂಡಿರುವ ಮಕ್ಕಳು/ವ್ಯಕ್ತಿಗಳು ಸಾಮಾನ್ಯವಾಗಿ ಅವರ ಹೆಸರನ್ನು ಕರೆದಾಗ ಸ್ಪಂದಿಸಲು ಸಮಸ್ಯೆಗಳಾಗುತ್ತವೆ. ಮತ್ತೆ ಕೆಲವೊಮ್ಮೆ ತಮ್ಮ ಕುಟುಂಬದವರನ್ನೇ ಅಂದರೆ ಅವರ ಪೋಷಕರನ್ನೇ ಗುರುತಿಸಲು ಆಗದೇ ಇರಬಹುದು. ಬೇರೆಯವರೊಂದಿಗೆ ದಿಟ್ಟಿಸಿ ಅಂದರೆ ಕಣ್ಣಲ್ಲಿ ಕಣ್ಣಿಟ್ಟು ಮಾತನಾಡಲು ಅಥವಾ ಸಂವಹನದಲ್ಲಿ ತೊಡಗಿಸಿಕೊಳ್ಳಲು ಸಾಧ್ಯ ಆಗದೇ ಇರುವುದು. ವಯಸ್ಸಿಗೆ ಅನುಗುಣವಾಗಿ ಸಾಮಾಜಿಕ ಬೆಳವಣಿಗೆ ಆಗದೇ ಇರಬಹುದು. ತಮ್ಮ ಅನಿಸಿಕೆ, ಭಾವನೆಗಳನ್ನು ವ್ಯಕ್ತಪಡಿಸಲು ಸಮಸ್ಯೆ ಹಾಗೂ ಒಬ್ಬಂಟಿಯಾಗಿ ಕಾಲಕಳೆಯಲು ಇಚ್ಛಿಸುವುದು.

ಈ ರೀತಿಯ ಸಮಸ್ಯೆಗಳು ಗಂಡು ಹಾಗೂ ಹೆಣ್ಣು ಮಕ್ಕಳಿಬ್ಬರಲ್ಲೂ ನೋಡಬಹುದು. ಆದರೆ ಸಾಮಾನ್ಯವಾಗಿ ಗಮನಿಸಿದರೆ ನಮ್ಮ ವೈಜ್ಞಾನಿಕ ಅಧ್ಯಯನಗಳ ಆಧಾರದ ಮೇಲೆ ಶೇಕಡ ಗಂಡು ಮಕ್ಕಳಲ್ಲೇ ಈ ಸಮಸ್ಯೆ ಜಾಸ್ತಿಯಾಗಿ ಕಂಡುಬರುತ್ತದೆ. ಈ ಸ್ವಲೀನತೆ ಬರಲು ಹಲವಾರು ಕಾರಣಗಳಿವೆ. ಇದು ಕೆಲವೊಮ್ಮೆ ವಂಶಪಾರಂಪರ್ಯವಾಗಿ ಬಂದರೆ, ಕೆಲವೊಂದು ಮಾರಕ ಪರಿಸರದಿಂದಲೂ ಕಾರಣವಾಗಬಹುದು.

ಸ್ವಲೀನತೆಯನ್ನು ಗುರುತಿಸಲು ಏಕೈಕ ಪರೀಕ್ಷೆ ಎಂದಿಲ್ಲ. ಇದನ್ನು ಗುರುತಿಸಲು ಪೂರ್ತಿ ಪ್ರಮಾಣದ ವೈದ್ಯಕೀಯ ತಂಡದ ಅವಶ್ಯಕತೆ ಇದೆ. ಈ ತಂಡವು ನುರಿತ ತಜ್ಞರಾದ ನರಮಾನಸಿಕ ತಜ್ಞರು, ಮಾನಸಿಕ ತಜ್ಞರು , ಭಾಷಾ ತಜ್ಞರು, ಮಕ್ಕಳ ತಜ್ಞರು ಹೀಗೆ ಎಲ್ಲರೂ ಅವರದೇ ರೀತಿಯ ಪರೀಕ್ಷೆಗಳ ಮೂಲಕ ಇದನ್ನು ಖಚಿತಪಡಿಸಬಹುದಾಗಿದೆ. ಈ ರೀತಿಯ ಸಮಸ್ಯೆಯನ್ನು ಗುರುತಿಸಬೇಕಾದರೆ ಕೆಲವೊಂದು ಎಚ್ಚರವನ್ನು ವಹಿಸಬೇಕಾಗುತ್ತದೆ. ಯಾಕೆಂದರೆ ಗುರುತಿಸಿದ ಎಲ್ಲಾ ಮಕ್ಕಳಲ್ಲಿ ಅವರ ತಿಳುವಳಿಕೆ ಜ್ಞಾನ ಉದಾಹರಣೆಗೆ ಬುದ್ಧಿಶಕ್ತಿ ಒಂದೇ ಆಗಿರುವ ಅವಶ್ಯಕತೆ ಇಲ್ಲ. ಅವನು ಅಥವಾ ಅವಳು ಬುದ್ಧಿಮಾಂದ್ಯ ಮಗು/ವ್ಯಕ್ತಿಯಾಗಿರ ಬೇಕೆಂದೇನಿಲ್ಲ ಯಾಕೆಂದರೆ ಈ ರೀತಿಯ ಕೆಲವು ಮಕ್ಕಳನ್ನು ನಾವು Asperger Syndrome ಎಂದು ಕೂಡ ಗುರುತಿಸುತ್ತೇವೆ.

ಈ ಮಕ್ಕಳು, ಬುದ್ಧಿಮಾಂದ್ಯತೆ ಹೊಂದಿರುವ ಅವಶ್ಯಕತೆ ಇಲ್ಲ. ಹಾಗಾಗಿ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಸ್ವಲೀನತೆ ಒಂದು ರೀತಿಯಾಗಿ ಕಂಡು ಬರುವುದಿಲ್ಲ. ಹಾಗೆಯೇ ಇದರ ತೀವ್ರತೆ ಅಥವಾ ಪ್ರಮಾಣವು ಕೂಡ ಏರುಪೇರಾಗುತ್ತದೆ.ಇಂತಹ ಮಕ್ಕಳನ್ನು ಬೆಳೆಸುವಲ್ಲಿ ತಂದೆ, ತಾಯಿಯ ಜವಾಬ್ದಾರಿ ಬಹಳ. ಇದನ್ನು ಬಹಳವಾಗಿ 3 ವರ್ಷದ ಪ್ರಾಯದಲ್ಲಿ ಖಚಿತವಾಗಿ ಗುರುತಿಸಲಾಗುತ್ತದೆ. ಈ ರೀತಿ ಸೂಕ್ತ ಸಮಯದಲ್ಲಿ ಸ್ವಲೀನತೆ ದೃಢಪಡಿಸಿದಲ್ಲಿ ಮಕ್ಕಳಿಗೆ ಸರಿಯಾದ/ಸೂಕ್ತ ರೀತಿಯ ಚಿಕಿತ್ಸೆಗಳನ್ನು ನೀಡಬಹುದಾಗಿದೆ. ಈ ರೀತಿಯ ಮಕ್ಕಳಿಗೆ ಹಲವು ವಿಚಾರವಾಗಿ ಚಿಕಿತ್ಸೆಯ ಆವಶ್ಯಕತೆಯಿರುತ್ತದೆ.ಮಾತಿಗೆಸಂಬಂಧವಾಗಿ ಮಾತಿನ ಚಿಕಿತ್ಸೆ (ಖಠಿಜಜಛಿ ಖಿಜಡಿಚಿಠಿಥಿ) ವರ್ತನೆ ಸಮಸ್ಯೆಯಿದ್ದಲ್ಲಿ ತಂದೆ, ತಾಯಿಗೆ ಆಪ್ತ ಸಮಾಲೋಚನೆ, ಕುಟುಂಬದವರೊಂದಿಗೆ (Family Therapy) ಔದ್ಯೋಗಿಕ ಚಿಕಿತ್ಸೆ (Oc-cupasional Therapy) ಹಾಗೆಯೇ ಕೆಲವೊಮ್ಮೆ ಮಾತೇ ಮದ್ದು ಅವಶ್ಯಕತೆ ಇರಬಹುದು.

ಹೀಗೆ ತಂದೆ, ತಾಯಿ ಸೂಕ್ತ ಸಮಯದಲ್ಲಿ ಇಂತಹ ಮಗುವನ್ನು ಗುರುತಿಸಿ, ಚಿಕಿತ್ಸೆ ಕೊಡುತ್ತಾರೋ ಆಗ ಈ ಮಕ್ಕಳಲ್ಲಿರುವ ವಿಶೇಷವಾದ ಶಕ್ತಿಯನ್ನು ಕಂಡು ಹಿಡಿದು ತರಬೇತಿ ನೀಡಬಹುದಾಗಿದೆ. ಹೇಗೆ ಒಂದು ಮಗು ಆರೋಗ್ಯವಾಗಿದ್ದಾಗ ಶಾಲೆಯ ಅವಶ್ಯಕತೆ ಇರುತ್ತದೆಯೋ ಹಾಗೇ ಇಂತಹ ಮಕ್ಕಳಿಗೂ ಶಾಲೆಯ ಅವಶ್ಯಕತೆ ಹಾಗೂ ಪೋಷಕರ ಗಮನ

ಅಗತ್ಯವಿದೆ. ಹೇಗೆ ದೈಹಿಕ ಕಾಯಿಲೆಗಳಿಗೆ ಒತ್ತು ಕೊಡುತ್ತೇವೆಯೋ ಹಾಗೆಯೇ ಸೂಕ್ತ ಸಮಯದಲ್ಲಿ ಚಿಕಿತ್ಸೆ ನೀಡಿದರೆ ಮಗುವಿನ ಬೆಳವಣಿಗೆ ಉತ್ತಮವಾಗುತ್ತದೆ.ಈ ರೀತಿಯ ಸಮಸ್ಯೆಗಳಿಂದ ಯಾರಾದರೂ ಬಳಲುತ್ತಿದ್ದರೆ ಅವರನ್ನು ಸೈಕಿಯಾಟ್ರಿ ಅಥವಾ ಕ್ಲಿನಿಕಲ್ ಸೈಕಾಲಜಿ ವಿಭಾಗದಲ್ಲಿ ತೋರಿಸಿ ಸೂಕ್ತ ಚಿಕಿತ್ಸೆ ನೀಡುವುದು ಒಳಿತು.

ಡಾ। ಶ್ವೇತಾ ಟಿ.ಎಸ್. ಸಹ ಪ್ರಾಧ್ಯಾಪಕರು ಕ್ಲಿನಿಕಲ್ ಸೈಕಾಲಜಿ ವಿಭಾಗ, ಕೆ.ಎಂ.ಸಿ., ಮಣಿಪಾಲ

ಈ ಲೇಖನದಲ್ಲಿರುವ ವಿಚಾರಗಳ ಬಗ್ಗೆ ಹೆಚ್ಚಿನ ಮಾಹಿತಿಗಳಿಗಾಗಿ ಸಂಪರ್ಕಿಸಿ: ಮುಖ್ಯಸ್ಥರು, ಕ್ಲಿನಿಕಲ್ ಸೈಕಾಲಜಿ ವಿಭಾಗ, ಕೆಎಂಸಿ, ಮಾಹೆ, ಮಂಗಳೂರು

# ನೀರಾವರಿ ಯೋಜನೆಗಳ ಅನುಮತಿಗೆ ಸಿಎಂ ಮನವಿ

**ನವದೆಹಲಿ :** ಮುಖ್ಯಮಂತ್ರಿ ಸಿದ್ದರಾಮಯ್ಯ ದೆಹಲಿಯಲ್ಲಿಂದು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್‌ರವರನ್ನು ಭೇಟಿ ಮಾಡಿ ರಾಜ್ಯದಲ್ಲಿ ನೆನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳಿಗೆ ಅನುಮತಿ ನೀಡುವಂತೆ ಮನವಿ ಮಾಡಿದ್ದಾರೆ.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ನವದೆಹಲಿಯ ವಿಶೇಷ ಪ್ರತಿನಿಧಿ ಟಿ.ಬಿ.ಜಯಚಂದ್ರ ಅವರೊಂದಿಗೆ ಕೇಂದ್ರ ಸಚಿವರನ್ನು ಸಿದ್ದರಾಮಯ್ಯ ಭೇಟಿ ಮಾಡಿದರು. ಈ ವೇಳೆ ರೈಲ್ವೆ ಹಾಗೂ ಕೇಂದ್ರ ಜಲಶಕ್ತಿ ರಾಜ್ಯ ಸಚಿವ ವಿ.ಸೋಮಣ್ಣ ಉಪಸ್ಥಿತರಿದ್ದರು.

ಕರ್ನಾಟಕ ರಾಜಸ್ಥಾನ ಬಳಿಕ ಅತಿ ಹೆಚ್ಚು ಮರುಭೂಮಿಯನ್ನು ಹೊಂದಿದೆ.

ಕೃಷಿ, ಭೂ ಬಳಕೆ, ಆಹಾರೋತ್ಪಾದನೆ, ನೀರಿನ ನಿರ್ವಹಣೆ, ನಾವಿನ್ಯ ತಂತ್ರಜ್ಞಾನ ಅಳವಡಿಕೆ, ಹವಾಮಾನ ಬದಲಾವಣೆಯ ಸವಾಲುಗಳ ನಿರ್ವಹಣೆ, ಸಾಮಾಜಿಕ-ಆರ್ಥಿಕ ಬೆಳವಣಿಗೆಗಳಲ್ಲಿ ಮುಂಚೂಣಿಯಲ್ಲಿದೆ. ಕರ್ನಾಟಕಕ್ಕೆ ಅಗತ್ಯವಾದ ನೀರಿನ ಸರಬರಾಜಿಗೆ ಆದ್ಯತೆ ನೀಡಬೇಕಿದೆ. ಕರ್ನಾಟಕ ಸರ್ಕಾರ ಈಗಾಗಲೇ ರವಾನಿಸಿರುವ ಪ್ರಸ್ತಾವನೆಗಳ ಪೈಕಿ ಮೇಕೆದಾಟು, ಭದ್ರಾ ಮೇಲ್ದಂಡೆ ಯೋಜನೆಗಳು ಬಾಕಿ ಉಳಿದಿವೆ. ಕೇಂದ್ರ ಸಚಿವರು ಮಧ್ಯಪ್ರವೇಶಿಸಿ ಇವುಗಳಿಗೆ ಅನುಮೋದನೆ ಕೊಡಿಸಬೇಕಾಗಿ ಮನವಿ ಮಾಡಿದ್ದಾರೆ.

ಪ್ರಮುಖವಾಗಿ ಮೇಕೆದಾಟು ಯೋಜನೆಯ ಬಗ್ಗೆ ಪ್ರಸ್ತಾಪಿಸಿರುವ ಮುಖ್ಯಮಂತ್ರಿಗಳು ಯೋಜನೆಯ ಆರಂಭದಿಂದ ಇತ್ತೀಚಿನವರೆಗಿನ ಬೆಳವಣಿಗೆಗಳ ಸಮಗ್ರ ಮಾಹಿತಿ ನೀಡಿದ್ದಾರೆ. ಕುಡಿಯುವ ನೀರು ಹಾಗೂ ವಿದ್ಯುತ್ ಉತ್ಪಾದನೆ ಈ ಯೋಜನೆಯಿಂದ ಕರ್ನಾಟಕ ಹಾಗೂ ತಮಿಳುನಾಡು ಈ ಎರಡೂ ರಾಜ್ಯಗಳಿಗೂ



ಅನುಕೂಲವಾಗಲಿದೆ ಎಂದು ಪ್ರಸ್ತಾಪಿಸಿದ್ದಾರೆ. ಜಲಶಕ್ತಿ ಸಚಿವರು, ಕೇಂದ್ರ ಜಲ ಆಯೋಗದ ಪ್ರಾಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿ ವಿಸ್ತೃತ ಯೋಜನಾ ವರದಿಗೆ ಮಂಜೂರಾತಿ ನೀಡುವುದು ಹಾಗೂ ಮೇಕೆದಾಟು ಯೋಜನೆಯ ಅನುಷ್ಠಾನಕ್ಕೆ ಅಗತ್ಯ ನಿರಾಕ್ಷೇಪಣಾ ಸಹಕಾರ ನೀಡುವಂತೆ ಮನವಿ ಮಾಡಿದ್ದಾರೆ.

ಭದ್ರಾ ಮೇಲ್ದಂಡೆ ಯೋಜನೆಗಾಗಿ ಈ ಹಿಂದೆ 2023-24ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿದಂತೆ 5300 ಕೋಟಿ ರೂ.ಗಳ ಅನುದಾನವನ್ನು ಶೀಘ್ರವೇ ಬಿಡುಗಡೆ ಮಾಡಬೇಕೆಂದು ಮನವಿ ಮಾಡಿದ್ದಾರೆ.

ಕೃಷ್ಣಾ ನದಿ ನೀರು ವಿವಾದದ ಕುರಿತು ಪ್ರಸ್ತಾಪಿಸಿರುವ ಮುಖ್ಯಮಂತ್ರಿಯವರು ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಕೇಂದ್ರ ಸರ್ಕಾರ ರಾಷ್ಟ್ರೀಯ ಯೋಜನೆಯೆಂದು ಘೋಷಣೆ ಮಾಡಬೇಕು. ಆಂಧ್ರ ಪ್ರದೇಶ ಮತ್ತು ತೆಲಂಗಾಣ ನಡುವಿನ ನೀರಿನ ಹಂಚಿಕೆ ತಗಾದೆಗೆ ಸಂಬಂಧಪಟ್ಟಂತ ಅರ್ಜಿಯನ್ನು ಇತ್ಯರ್ಥಪಡಿಸಲು ಕೂಡಲೇ ಸುಪ್ರೀಂಕೋರ್ಟ್‌ಗೆ ಸಮರ್ಪಕ ಅರ್ಜಿ ಸಲ್ಲಿಸಬೇಕು ಎಂದು ಮನವಿ ಮಾಡಿದ್ದಾರೆ.

ಕಳಸಾ ಬಂಡೂರಿ ನಾಲಾ ಯೋಜನೆಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ವತಿಯಿಂದ ಅಗತ್ಯ ಪೂರ್ವಾನುಮತಿ ಕೊಡಿಸಬೇಕು ಎಂದು ಮನವಿ ಮಾಡಿದ್ದಾರೆ. ಪ್ರಮುಖವಾಗಿ ಗೋದಾವರಿ-ಕಾವೇರಿ ನದಿ ಜೋಡಣೆ, ಬೇಡ್ತಿ-ವರದಾ ನದಿ ಜೋಡಣೆ ಯೋಜನೆಯಲ್ಲಿ ಕರ್ನಾಟಕಕ್ಕೆ ಹೆಚ್ಚಿನ ನೀರು ದೊರೆಯುವಂತೆ ಕಾಳಜಿ ವಹಿಸಬೇಕು ಎಂದು ಮನವಿ ಮಾಡಿದ್ದಾರೆ.

ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಕರ್ನಾಟಕ ಸೇರಿದಂತೆ ನಾಲ್ಕು ರಾಜ್ಯಗಳ ನಡುವೆ ಹರಿಯುವ ಈ ನದಿಗಳನ್ನು ಜೋಡಣೆ ಮಾಡುವ ಪ್ರಸ್ತಾವನೆ ಚಾಲ್ತಿಯಲ್ಲಿದೆ. ಮತ್ತಷ್ಟು ಸಮಾಲೋಚನಾ ಸಭೆಗಳನ್ನು ನಡೆಸಿ ರಾಜ್ಯವಾರು ನೀರಾವರಿ ಪ್ರದೇಶಗಳಲ್ಲಿ ಭೇಟಿ ನೀಡಿ ಪುನರ್ ಪರಿಶೀಲನೆ ಮಾಡುವ ಮೂಲಕ ರಾಜ್ಯಕ್ಕೆ ನ್ಯಾಯೋಚಿತವಾಗಿ ನೀರಿನಲ್ಲಿ ಹೆಚ್ಚಿನ ಪಾಲು ಕೊಡಿಸುವಂತೆ ಮನವಿ ಮಾಡಿದ್ದಾರೆ.

## ಚಿಗಳಿಗೆ ದತ್ತಿನಿಧಿ ಪ್ರಶಸ್ತಿ



**ರಬಕವಿ-ಬನಹಟ್ಟಿ:** ಹಿರಿಯ ಸಾಹಿತಿ ಮಲ್ಲಿಕಾರ್ಜುನ ಹುಲಗಬಾಳಿಯವರು ಬರೆದ 'ಚಿಗಳಿ' ಪುಸ್ತಕಕ್ಕೆ ಜಿಲ್ಲಾ ಸಾಹಿತ್ಯ ಪರಿಷತ್ತು ಕೊಡ ಮಾಡುವ ದತ್ತಿನಿಧಿ ಲಭಿಸಿದೆ.

## ನಾಡಿನ ಸಂಸ್ಕೃತಿಯ ಶ್ರೀಮಂತಿಕೆಗೆ ಶರಣರ ಕೊಡುಗೆ ಅಪಾರ: ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ

**ಬಾಗಲಕೋಟೆ :** 'ಕನ್ನಡ ನಾಡಿನ ಅನೇಕ ಆಚಾರವಿಚಾರ,ಸಂಸ್ಕೃತಿಗೆ ಶರಣರ ಕೊಡುಗೆ ಅಪಾರವಾಗಿದೆ. ಕಾಯಕ ತತ್ವ, ದಾಸೋಹ ತತ್ವಗಳ ಜೊತೆಗೆ ಅನೇಕ ಸಾಮಾಜಿಕ ಚಿಂತನೆಗಳುಳ್ಳ ವಚನಗಳ ಮೂಲಕ ಶರಣ ಸಂಸ್ಕೃತಿ ಬೆಳೆದು ಬಂದದ್ದು, ಅಂತಹ ಶರಣ ಸಂಸ್ಕೃತಿಯ ಆದ್ಯ ವಚನಕಾರ ದೇವರ ದಾಸಿಮಯ್ಯನವರು' ಎಂದು ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಹೇಳಿದರು.

ಜಿಲ್ಲಾ ಪಂಚಾಯತ್ ಅಡಿಟೋರಿಯಂನಲ್ಲಿ ಬುಧವಾರ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಾಗಲಕೋಟೆ ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಆದ್ಯ ಶರಣ ದೇವರ ದಾಸಿಮಯ್ಯನವರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಾ 'ಇಂದು ನಾಡಿನ ಪ್ರತಿ ಮನೆಮನೆಯಲ್ಲೂ ಪ್ರತಿನಿತ್ಯ ನಡೆಯುತ್ತಿರುವ ಪೂಜೆ, ಪುನಸ್ಕಾರಗಳು, ದಾನ ಧರ್ಮ, ದಾಸೋಹ ಹಿಂದೆ ನಮ್ಮ ಪೂರ್ವಜರು ಹಾಗೂ 12ನೇ ಶತಮಾನದ ಶರಣರ ವಚನಗಳ ಆದರ್ಶವಡಗಿದೆ. ಶರಣರಲ್ಲಿಯೇ ಅಗ್ರಸ್ಥಾನ ಪಡೆದುಕೊಂಡಂತ ಹಾಗೂ ಪ್ರಥಮ ವಚನಕಾರರಾದ ದೇವರ ದಾಸಿಮಯ್ಯನವರು ಶರಣ ಶ್ರೇಷ್ಠರಾಗಿದ್ದು,



ಭಕ್ತಿಯಮೂಲಕತತ್ವಶಾಸ್ತ್ರಹೇಳಿದಂತಹವರು ದಾಸಿಮಯ್ಯನವರು. ಅಂತಹ ಶರಣರನ್ನು ನಾವು ಒಂದು ಜನಾಂಗಕ್ಕೆ ಹಾಗೂ ಜಾತಿಗೆ ಸೀಮಿತಗೊಳಿಸದೆ ವಿಶ್ವಮಾನವರನ್ನಾಗಿ ಗುರುತಿಸಬೇಕಾಗಿದೆ' ಎಂದರು.

ಕಾರ್ಯಕ್ರಮಕ್ಕೆ ಮುಖ್ಯ ಉಪನ್ಯಾಸಕರಾಗಿ ಆಗಮಿಸಿದ್ದ, ಬೆಂಗಳೂರಿನ ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯರಾದ ಮಹದೇವ ಬಸರಕೋಡ ಮಾತನಾಡುತ್ತ, 'ಮದುವೆಯಾಗಿಮರುದಿನವೇಡೈವೋರ್ಸ್ ಕೇಳುವ ಈ ಕಾಲಕ್ಕೆ ದಾಸಿಮಯ್ಯನವರ ದಾಂಪತ್ಯ ತತ್ವ ಆದರ್ಶನೀಯ. ಮತ್ತೆ ಆ ತತ್ವವನ್ನು ಜಗತ್ತಿಗೆ ತಿಳಿಸಿ, ಜೀವನದಲ್ಲಿ ಅಳವಡಿಸಿಕೊಳ್ಳಬೇಕಾಗಿದೆ.ತಮ್ಮ ವಚನಗಳ ಮೂಲಕ ಹಸಿವು, ಕೆಳ ಸ್ತರದ ನೋವು ಮುಂತಾದವುಗಳ ಕುರಿತು ವಿವರಿಸಿದ ಉದಾತ್ತ ಚಿಂತನೆಗಳ ದಾಸಿಮಯ್ಯನವರನ್ನು ಒಬ್ಬ ದೇವಪುರುಷನಂತೆ ಕಾಣದೇ, ಒಬ್ಬ ಚಾರಿತ್ರಿಕ ಪುರುಷನಂತೆ ಕಾಣಬೇಕಾಗಿದೆ' ಎಂದರು.

ಇನ್ನೊರ್ವ ಉಪನ್ಯಾಸಕ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಬಾಗಲಕೋಟೆಯ ಉಪನ್ಯಾಸಕ ಶಿವಶಂಕರ್ ಎನ್ ಮುತ್ತಗಿ, 'ಸಂಸ್ಕೃತವನ್ನು ದೇವ ಭಾಷೆಯನ್ನಾಗಿ ಕಾಣುತ್ತಿದ್ದ ಸಮಯದಲ್ಲಿ ಬುದ್ಧ, ಮಹಾವೀರ, ದಾಸಿಮಯ್ಯನ ಮಹನೀಯರು ತಮ್ಮ ತಮ್ಮ ಮೂಲ ಭಾಷೆಗಳಲ್ಲಿಯೇ ತಮ್ಮ ಜನಾಂಗವನ್ನು ಕಟ್ಟಿ ಸುಧಾರಿಸಿದರು. ಬಸವಣ್ಣನವರ ವಿಚಾರಗಳಿಗೂ ಕೂಡ ಅಡಿಪಾಯ ಹಾಕಿಕೊಟ್ಟದ್ದು ದಾಸಿಮಯ್ಯನವರ ವಚನಗಳೇ ಎಂಬುದು ವಿಶೇಷ' ಎಂದರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕರ್ಣಕುಮಾರ್ ಜೈನಾಪುರ ಕಾರ್ಯಕ್ರಮಕ್ಕೆ ಸ್ವಾಗತಿಸಿ, ವಂದಿಸಿದರು. ಶಂಕರಲಿಂಗ ದೇಸಾಯಿ ನಿರೂಪಣೆ ಮಾಡಿದ್ದು, ಮಂಜುಳಾ ಸಂಬಾಳಮಠ ಸುಗಮ ಸಂಗೀತ ನೀಡಿದರು.

ಕಾರ್ಯಕ್ರಮದಲ್ಲಿ ರಾಜ್ಯ ನೇಕಾರರ ಸಂಘದ ಮಾಜಿ ಅಧ್ಯಕ್ಷ ಡಾ. ಎಮ್ ಎಸ್ ದಡ್ಡೆಣ್ಣವರ್, ಬಿಡಿಸಿ ಸಿ ಬ್ಯಾಂಕ್ ನಿರ್ದೇಶಕ ಮುರುಗೇಶ್ ಕಡ್ಲಿಮಟ್ಟಿ, ಅಪೆಕ್ಸ್ ಬ್ಯಾಂಕಿನ ರವೀಂದ್ರ ಕಲಬುರ್ಗಿ, ನಗರಸಭೆ ಮಾಜಿ ಸದಸ್ಯೆ ಭಾಗ್ಯಶ್ರೀ ಹಂಡಿ, ಬಸವೇಶ್ವರ ಬ್ಯಾಂಕಿನ ನಿರ್ದೇಶಕ ಶ್ರೀನಿವಾಸ್ ಬಳ್ಳಾರಿ, ಸೇರಿದಂತೆ ಸಮುದಾಯದ ಹಿರಿಯರು ಉಪಸ್ಥಿತರಿದ್ದರು.

## ಶ್ರೀಶೈಲಕ್ಕೆ ಹೋಗಿ ಬಂದ ಕಂಬಿ ಮಲ್ಲಯ್ಯನನ್ನು, ಭಕ್ತರನ್ನು ಗ್ರಾಮದೊಳಗೆ ಗ್ರಾಮಸ್ಥರು ಬರಮಾಡಿಕೊಂಡರು



**ಹಳ್ಳೂರ :** ಶ್ರೀಶೈಲ ಮಲ್ಲಿಕಾರ್ಜುನ, ಬ್ರಹ್ಮರಾಂಬ ದೇವರ ದರ್ಶನ ಆಶೀರ್ವಾದ ಪಡೆದುಕೊಂಡ ಸಾವಿರಾರು ಗ್ರಾಮಸ್ಥರು ಯುಗಾದಿ ಪಾಡ್ಯ ದಿನ ಶ್ರೀಶೈಲ ದಿಂದ ಬಂದು ವರ್ಷದ ಪದ್ಧತಿ ಪ್ರಕಾರ ಕಪ್ಪಲಗುದ್ದಿ ಶ್ರೀ ಮಲ್ಲಿಕಾರ್ಜುನ ದೇವಸ್ಥಾದಲ್ಲಿ ಕೆಲವು ದಿನವಿದ್ದು ಗುರುವಾರ ಮುಂಜಾನೆ ಗ್ರಾಮದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಒಟ್ಟುಗುಡಿ ನಂತರ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಿಂದ ಆರತಿ ವಿವಿಧ ವಾದ್ಯ ಮೇಳದೊಂದಿಗೆ ಶ್ರೀಶೈಲಕ್ಕೆ ಹೋಗಿ ಬಂದ ಜೋಡು ಕಂಬಿ ಮಲ್ಲಯ್ಯ ದೇವರನ್ನು ಹಾಗೂ ಭಕ್ತರನ್ನು ಗ್ರಾಮದೊಳಗೆ ಹಿಂದಿನ ಸಾಂಪ್ರದಾಯ ಪದ್ಧತಿ ಪ್ರಕಾರ ಗ್ರಾಮದೋಳಗೆ ಬರಮಾಡಿಕೊಂಡರು. ನಂತರ ಮಂಗಳಾರುತಿ ಮಾಡಿ ಭಕ್ತರು ತಮ್ಮ ತಮ್ಮ ಮನೆಗೆ ತೆರಳಿದರು. ಭಕ್ತರು ನಾಸ್ಟಾ, ತಂಪಾದ ಪಾನಿಯ ವ್ಯವಸ್ಥೆ ಮಾಡಿದರು. ಬರುವ ಸೋಮವಾರ ದಂದು ಕಂಬಿ ಐದೇಶಿ ಕಾರ್ಯಕ್ರಮವು ಜರುಗಲಿದೆ.

## ಯತ್ನಾಳ ಉಚ್ಚಾಟನೆಯಿಂದ ಪಕ್ಷಕ್ಕೆ ತುಂಬಲಾರದ ನಷ್ಟ: ಧರೇಪ್ಪ ಠಕ್ಕಣ್ಣವರ




**ಅಥಣಿ :** ಬಸನಗೌಡ ಯತ್ನಾಳರನ್ನ ಪಕ್ಷದಿಂದ ಉಚ್ಚಾಟನೆ ಮಾಡಿರುವುದರಿಂದ ಯುವಕರು ಪಕ್ಷದಿಂದ ದೂರವಾಗುತ್ತಿದ್ದಾರೆ, ಪಕ್ಷದ ಹೈಕಮಾಂಡ್ ಶೀಘ್ರವಾಗಿ ಒಂದು ಸಮಿತಿ ರಚಿಸಿ ಜನಾಭಿಪ್ರಾಯ ಸಂಗ್ರಹಿಸಬೇಕು. ಜನಾಭಿಪ್ರಾಯದ ವರದಿಯನ್ನು ಆದರಿಸಿ ಪಕ್ಷಕ್ಕೆ ಸೇರಿಸಿಕೊಳ್ಳಿ, ಇಲ್ಲವಾದರೆ ಪಕ್ಷಕ್ಕೆ ತುಂಬಲಾರದ ನಷ್ಟವಿದೆ ಎಂದು ಬಿಜೆಪಿ ಮುಖಂಡ ಧರೇಪ್ಪ ಠಕ್ಕಣ್ಣವರ ಹೇಳಿದರು.

ಪಟ್ಟಣದಲ್ಲಿ ಯತ್ನಾಳ ಉಚ್ಚಾಟನೆ ಖಂಡಿಸಿ ಮಂಗಳವಾರ ಹಿಂದೂ ಕಾರ್ಯಕರ್ತರು ಹಮ್ಮಿಕೊಂಡ ಪ್ರತಿಭಟನೆ ನೇತೃತ್ವ ವಹಿಸಿ ಮಾತನಾಡಿದ ಅವರು ಬಿಜೆಪಿಯನ್ನು ಯುವಕರು ಹಿಂದೂತ್ವಕ್ಕಾಗಿ ನೆಚ್ಚಿಕೊಂಡಿದ್ದಾರೆ.

ಆದರೆ ಪಕ್ಷದವರು ಹಿಂದುತ್ವಕ್ಕಾಗಿ ಹೋರಾಟದ ಮಾಡುತ್ತಿರುವ ನಮ್ಮ ನಾಯಕರನ್ನ ಉಚ್ಚಾಟನೆ ಮಾಡುವದು ಎಷ್ಟು ಸರಿ , ಈಗಲೂ ಕಾಲ ಮಿಂಚಿಲ್ಲಾ ವರಿಷ್ಠರು ಯತ್ನಾಳ ಅವರ ಬಗ್ಗೆ ತಿಳಿದುಕೊಳ್ಳಲು ಒಂದು ಸಮಿತಿ ರಚನೆ ಮಾಡಿ ವರದಿ ತರಸಿಕೊಳ್ಳಿ. ಖಂಡಿತವಾಗಿ ಅವರ ಪರವಾದ ವರದಿ ಬರುತ್ತದೆ ಆಗಲಾದರೂ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳಿ ಎಂದು ಹೇಳಿದರು .

ವಿಜಯಪುರದ ಮುಖಂಡ ಡಾ.ಬಸನಗೌಡಾ ಪಾಟೀಲ (ನಾಗರಾಳ ಹುಲಿ) ಮಾತನಾಡಿ ವಾಜಪೇಯಿ ಅವರ ಅವದಿಯಲ್ಲಿ ಕೇಂದ್ರ ಸಚಿವರಾಗಿದ್ದ ಬಸನಗೌಡಾ ಪಾಟೀಲ ಅವರ ಕರ್ನಾಟಕದಲ್ಲಿ ಹಿರಿಯ ನಾಯಕರು ಅವರು ಭ್ರಷ್ಟಾಚಾರ ರಹಿತ ಆಡಳಿತ ನೀಡಿದ ರಾಜಕಾರಣಿ. ಬಿಜೆಪಿ ಅದಿಕಾರಕ್ಕೆ ಬರಲು ಕುಟುಂಬ ರಾಜಕಾರಣ ವಿರುದ್ದ ಹೋರಾಟ ಮಾಡಿರುವುದು ಇದೆ, ಅದೆ ಒಂದು ಉದ್ದೇಶವನ್ನ ಯತ್ನಾಳ ಅವರು ಇಟ್ಟುಕೊಂಡು ಕರ್ನಾಟಕದಲ್ಲಿ ಕುಟುಂಬ ರಾಜಕಾರಣ ದೂರ ಮಾಡಬೇಕೆಂದು ಹೋರಾಟ ಮಾಡುತ್ತಾ ಬಂದಿದ್ದಾರೆ , ಹೊಂದಾಣಿಕೆ ಹಾಗೂ ಭ್ರಷ್ಟಾಚಾರ ರಹಿತ ಆಡಳಿತ ನೀಡಬೇಕು, ರಾಜ್ಯದಲ್ಲಿ ಹಿಂದುತ್ವಕ್ಕೆ ಹಿನ್ನಡೆಯಾದಾಗ ಹಿಂದುತ್ವಕ್ಕಾಗಿ ಎದ್ದು ನಿಂತವರು ಬಸನಗೌಡಾ ಪಾಟೀಲ ಯತ್ನಾಳ್ ಅವರು ಕೋಟ್ಯಾಂತರ ಜನ ಹಿಂದೂ ಅಭಿಮಾನಿಗಳನ್ನ ಅವರು ಹೊಂದಿದ್ದಾರೆ, ಶೀಘ್ರವಾಗಿ ಅವರ ಉಚ್ಚಾಟನೆಯನ್ನ ಮರು ಪರಿಶೀಲಿಸಿ ಅವರನ್ನ ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳಬೇಕೆಂದು ಆಗ್ರಹಿಸುತ್ತೇವೆ ಎಂದು ಹೇಳಿದರು.

ಪಟ್ಟಣದ ಶಿವಾಜಿ ಸರ್ಕಲ್ ನಿಂದ ಅಂಬೇಡ್ಕರ್ ಸರ್ಕಲ್ ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ, ಯತ್ನಾಳ್ ಅವರನ್ನು ಮತ್ತೆ ಪಕ್ಷಕ್ಕೆ ಸೇರ್ಪಡೆಗೆ ಒತ್ತಾಯಿಸಲಾಯಿತು.

ಈ ವೇಳೆ ಮುಖಂಡರಾದ ಶಶಿಕಾಂತ ಪಡಸಲಗಿ, ಎಸ್.ಎಸ್.ಪಾಟೀಲ, ಸತ್ಯಪ್ಪಾ ಬಾಗೆನ್ನವರ, ನಿಶಾಂತ ದಳವಾಯಿ , ಅನೇಕರು ಯತ್ನಾಳ ಅವರು ಉಚ್ಚಾಟನೆ ಖಂಡಿಸಿ ಮಾತನಾಡಿದರು.

ಈ ವೇಳೆ ಮುಖಂಡರಾದ ನಾನಾಸಾಬ ಅವತಾಡೆ. ವಿರೇಂದ್ರ ಕಾಗವಾಡೆ. ಅಶೋಕ ದಾನಗೌಡರ, ಅಣ್ಣಪ್ಪಾ ಹಳ್ಳೂರ. ಪ್ರಕಾಶ ಚನ್ನಣ್ಣವರ ,ಪ್ರಶಾಂತ ತೋಡಕರ, ಡಿ.ಸಿ.ನಾಯಿಕ , ಸಂಗಮೇಶ ಇಂಗಳಿ, ಸಿದ್ದು ಪಾಟೀಲ , ಅವಿನಾಶ ಜಾದವ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಯತ್ನಾಳ್ ಉಚ್ಚಾಟನೆ ಹಿಂಪಡೆಯಲು ಬಿಜೆಪಿ ಮುಖಂಡ ಗೌರಿಮಠ ಒತ್ತಾಯ

**ಕೊಲ್ಹಾರ :** ಪ್ರಬಲ ಹಿಂದೂ ಮುಖಂಡರು ಹಾಗೂ ಬಿಜೆಪಿಯ ವಿಜಯಪುರ ನಗರ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳರವರ ಉಚ್ಚಾಟನೆಯ ಆದೇಶವನ್ನು ಕೂಡಲೇ ಹಿಂಪಡೆಯಬೇಕು ಎಂದು. ಮಸೂತಿಯ ಬಿಜೆಪಿ ಹಿರಿಯ ಮುಖಂಡ ಎಸ್ ಎಸ್ ಗೌರಿಮಠ ಒತ್ತಾಯಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು,ಯತ್ನಾಳರವರು ಬಿಜೆಪಿಗೆ ಎಂದಿಗೂ ವಿರುದ್ದವಾಗಿ ನಡೆದುಕೊಂಡಿಲ್ಲ, ಎಂದಿಗೂ ಪಕ್ಷ ವಿರೋಧಿ ಚಟುವಟಿಕೆಯಲ್ಲಿ ಪಾಲ್ಗೊಂಡಿಲ್ಲ.ಅವರು ಬದಲಿಗೆ ಉತ್ತರ ಕರ್ನಾಟಕ ಅಭಿವೃದ್ಧಿಗೆ ಶ್ರಮಸಿದ್ದಾರೆ. ಕಾರಣ ಪಕ್ಷದ ವರಿಷ್ಠರು ಉಚ್ಚಾಟನೆ ಆದೇಶವನ್ನು ಮರುಪರಿಶೀಲಿಸಿ ಆದೇಶ ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದ್ದಾರೆ.

## ನಾಯಿ ಮೇಲೆ ಚಿರತೆ ದಾಳಿ: ಬೋನಿಗೆ ಬೀಳದ ಚಿರತೆ, ಗ್ರಾಮಸ್ಥರಲ್ಲಿ ಆತಂಕ

**ಗುಳೇದಗುಡ್ಡ :** ಸಮೀಪದ ಲಾಯದಗುಂದಿ ಗ್ರಾಮದಲ್ಲಿ ಅಮರೇಶ್ವರಕೊಳ್ಳದಹತ್ತಿರಇರುವಅಂಗಡಿಹಾಗೂಮಣ್ಣೂರ ಅವರಜಮೀನುಗಳಹತ್ತಿರರಾತ್ರಿಹೊತ್ತಿನಲ್ಲಿಕಾಣಿಸಿಕೊಳ್ಳುವ ಚಿರತೆಯು ಜಮೀನಿನಲ್ಲಿದ್ದ ನಾಯಿಯೊಂದನ್ನು ಕೊಂದು ಹೊಟ್ಟೆ ಭಾಗವನ್ನು ಸಂಪೂರ್ಣವಾಗಿ ತಿಂದಿದೆ.

ಎಂದಿನಂತೆ ಜಮೀನಿಗೆ ರಾತ್ರಿ ಅಂಗಡಿ, ಮಣ್ಣೂರ ಅವರು ತೆರಳುತ್ತಿದ್ದ ಸಮಯದಲ್ಲಿ ರಸ್ತೆಯ ಒಂದು ಕಡೆಯಿಂದ ಇನ್ನೊಂದು ಕಡೆಗೆ ಚಿರತೆ ಓಡಿ ಹೋಗಿದ್ದು ಕಂಡಿದೆ. ಜಮೀನಿನ ಹತ್ತಿರ ಬಂದಾಗ ಅರ್ಧ ತಿಂದುಬಿಟ್ಟ ನಾಯಿಯ ದೇಹವನ್ನು ನೋಡಿ ಗಾಬರಿಯಾದರು.

ಚಿರತೆ ದಾಳಿಯ ಬಗ್ಗೆ ಮಾಹಿತಿ ತಿಳಿಯುತ್ತಿದ್ದಂತೆ ಅರಣ್ಯ ಇಲಾಖೆಯ ಆರ್‌ಎಫ್‌ಐ ಮಹೇಶ ಮರಿಯನ್ನವರ, ಉಪವಲಯ ಅರಣ್ಯಾಕಾರಿ ಹೊಸಮನಿ, ಸಿಬ್ಬಂದಿಗಳು ಭೇಟಿ ನೀಡಿ, ಪರಿಶೀಲಿಸಿ, ಜಮೀನಿನಲ್ಲಿ ಕಂಡು ಬಂದ ಹೆಜ್ಜೆ ಗುರುತುಗಳು ಚಿರತೆಯದ್ದು ಎಂದು ಖಾತರಿಸಿಪಡಿಸಿಕೊಂಡರು. ಗ್ರಾಮದ ಮುಖಂಡರಾದ ಶರಣಪ್ಪ ಸಜ್ಜನ, ಶೇಖಪ್ಪ ಜಡಿ ಇದ್ದರು.

ಲಾಯದಗುಂದಿಗ್ರಾಮದಜಮೀನೊಂದರಲ್ಲಿನಾಯಿಯನ್ನು ಚಿರತೆ ಕೊಂದ ಬಗ್ಗೆ ಮಾಹಿತಿ ತಿಳಿಯುತ್ತಿದ್ದಂತೆ ಪಂಚಾಯಿತಿ ಪಿಡಿಓ ಅವರು ಗ್ರಾಮದಲ್ಲಿ ಚಿರತೆ ಆಗಮಿಸಿರುವ ಬಗ್ಗೆ ಮಾಹಿತಿಇದ್ದು ಜಮೀನುಗಳಿಗೆ ತೆರಳುವ ಜನರು ಎಚ್ಚರದಿಂದ ಸಂಚರಿಸುವಂತೆ ಡಂಗೂರದ ಮೂಲಕ



ಜಾಗೃತಿ ಮೂಡಿಸಿದರು.

ಫೆಬ್ರುವರಿ ತಿಂಗಳಲ್ಲಿ ಪಟ್ಟದಕಲ್ಲ ಕಾಟಾಪೂರ, ನಾಗಾರಳ ಎಸ್.ಪಿ. ಗ್ರಾಮಗಳ ಸುತ್ತಮುತ್ತ ಕಾಣಿಸಿಕೊಂಚಿರತೆಯು ಸುಮಾರು 10-15 ದಿನಗಳವರೆಗೆ ಅಲ್ಲಿಜನ ಜನರಿಗೆ ಸಾಕಷ್ಟು ಆತಂಕ ಸೃಷ್ಠಿ ಮಾಡಿತ್ತು. ಮತ್ತೇ ಕಳೇದ ತಿಂಗಳು ಸಮೀಪದ ಪರ್ವತಿ ಗ್ರಾಮದ ಕಾಶಮ್ಮ ಆಸಂಗಿ ಅವರ ಹೊಲದಲ್ಲಿದ್ದ ಕಾವಲಿದ್ದ ನಾಯಿಯ ಮೇಲೆ ರಾತ್ರಿ ಚಿರತೆ ದಾಳಿಮಾಡಿ ಗಾಯಗೊಳಿಸಿತ್ತು. ಇದರಿಂದ ಕೆರೆಖಾನಾಪೂರ, ಹುಲ್ಲಿಕೇರಿ ಎಸ್,ಪಿ.ಪರ್ವತಿ ಜನರಲ್ಲಿ ಆತಂಕ ಸೃಷ್ಠಿಸಿತ್ತು. ಅದಾದ ನಂತರ ಅರಣ್ಯ ಇಲಾಖೆ ಅಕಾರಿಗಳು ಸತತ ಪ್ರಯತ್ನ ಮಾಡುತ್ತಲೇ ಇದ್ದಾರೆ. ಆದರೆ ಆ ಚಿರತೆಯು ಒಂದು ಕಡೆ ಇರದೇ ಪದೇ ಪದೇ ಜಾಗ ಬದಲಾಯಿಸಿದ್ದರಿಂದ ಅರಣ್ಯ ಇಲಾಖೆ ಅಕಾರಿಗಳಿಗೆ ಚಿರತೆ ಹಿಡಿಯುವದು ಕಷ್ಟವಾಗಿದೆ.

**ಲಾಯದಗುಂದಿ ಗ್ರಾಮದಲ್ಲಿ ಚಿರತೆ ದಾಳಿ ಬಗ್ಗೆ ಪರಿಶೀಲಿಸಿದ್ದು, ಅಲ್ಲಿ ಬೋನ್ ಇರಿಸಲಾಗಿದೆ. ಅದರ ಜೊತೆಗೆ ಕ್ಯಾಮೇರ ಟ್ರ್ಯಾಪ್ ಅಳವಡಿಸಲಾಗಿದೆ. ಅರಣ್ಯ ಪ್ರದೇಶದಲ್ಲಿ ಬೆಂಕಿ ಕಾಣಿಸಿಕೊಳ್ಳುತ್ತಿರುವದಕ್ಕೆ ಚಿರತೆ ಪದೇ ಪದೇ ಜಾಗ ಬದಲಾಯಿಸುತ್ತಿದ್ದು, ಸೆರೆಹಿಡಿಯಲು ಕಷ್ಟವಾಗಿದೆ. ಜನರು ನಮ್ಮೊಂದಿಗೆ ಸಹಕರಿಸಬೇಕು.**

**। ಮಹೇಶ ಮರಿಯನ್ನವರ,**
**ವಲಯ ಅರಣ್ಯಾಕಾರಿ, ಬಾದಾಮಿ**

**ಕಳೇದ ಎರಡು ತಿಂಗಳಿಂದ ತಾಲೂಕಿನಲ್ಲಿ ಚಿರತೆ ಕಂಡು ಬರುತ್ತಿದ್ದು, ಲಾಯದಗುಂದಿ ಗ್ರಾಮದಲ್ಲಿ ಚಿರತೆ ಕಾಣಿಸಿಕೊಂಡಿದ್ದು ನಿಜ, ಹೆಜ್ಜೆ ಗುರುತುಗಳ ಮೂಲಕ ಗುರುತಿಸಲಾಗಿದ್ದು, ಗ್ರಾಮದಲ್ಲಿ ಬೋನ್ ಇರಿಸಲಾಗಿದೆ. ಜನರಿಗೂ ಜಾಗೃತಿ ಮೂಡಿಸಲಾಗಿದೆ. ಪದೇ ಪದೇ ಜಾಗ ಬದಲಾಯಿಸುತ್ತಿರುವದರಿಂದ ಹಿಡಿಯುವದು ಸ್ವಲ್ಪ ಕಷ್ಟವಾಗುತ್ತಿದೆ. ಶೀಘ್ರದಲ್ಲಿ ಪತ್ತೆ ಹಚ್ಚಿ ಹಿಡಿಯಲಾಗುವುದು.**

**। ಆರ್.ಎಸ್.ಹೊಸಮನಿ**
**ಉಪವಲಯ ಅರಣ್ಯಾಕಾರಿಗಳು**
**ಗುಳೇದಗುಡ್ಡ**

## ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸಭೆ

**ಬೆಳಗಾವಿ :** ಸರ್ಕಾರದ ಗ್ಯಾರಂಟಿ ಯೋಜನೆಗಳಾದ ಅನ್ನಭಾಗ್ಯ, ಗೃಹಲಕ್ಷ್ಮೀ, ಗೃಹಜ್ಯೋತಿ,ಶಕ್ತಿ,ಯುವನಿಧಿಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಶ್ರಮಿಸಬೇಕು. ಪಂಚ ಗ್ಯಾರಂಟಿ ಯೋಜನೆಗಳಿಗೆ ಸಂಬಂದಿಸಿದ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳ ಸಮನ್ವಯದೊಂದಿಗೆ ಗ್ಯಾರಂಟಿ ಯೋಜನೆಗಳ ಸಮಿತಿ ಸದಸ್ಯರು ಕಾರ್ಯನಿರ್ವಹಿಸಬೇಕು ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷ ವಿನಯ ನಾವಲಗಟ್ಟಿ ತಿಳಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಗ್ರಾಮೀಣ ಭಾಗದಲ್ಲಿ ಸಾರ್ವಜನಿಕರು ಹಾಗೂ ಫಲಾನುಭವಿಗಳೊಂದಿಗೆ ಮುಕ್ತ ಸಂವಾದ ನಡೆಸಬೇಕು. ಯೋಜನೆಗಳ ಪ್ರಯೋಜನ ಪಡೆಯುವಲ್ಲಿ ಫಲಾನುಭವಿಗಳು ಸಮಸ್ಯೆ ಎದುರಿಸುತ್ತಿದ್ದರೆ ತಕ್ಷಣ ಸ್ಪಂದಿಸಬೇಕು ಎಂದು ಹೇಳಿದರು. ಯೋಜನೆಯಿಂದ ಹೊರಗುಳಿದಿರುವ ಅರ್ಹ ಫಲಾನುಭವಿಗಳನ್ನು ಗುರುತಿಸಿ, ಯೋಜನೆಯ ಲಾಭ ದೊರಕಿಸಿಕೊಡುವ ನಿಟ್ಟಿನಲ್ಲಿ ಅಧಿಕಾರಿಗಳು, ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರು ಕಾರ್ಯಪ್ರವೃತ್ತರಾಗಬೇಕು ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷ ವಿನಯ ನಾವಲಗಟ್ಟಿ ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಕಾಧಿಕಾರಿ ರಾಹುಲ್ ಶಿಂಧೆ ಮಾತನಾಡಿ ಓಟಿಪಿ ಮೂಲಕ ಪಡಿತರ ಪಡೆಯಲು ಈ ಮುಂಚೆ ಅನುಮತಿ ಇತ್ತು ಆದರೆ ದುರ್ಬಳಕೆ ಆಗುತ್ತಿರುವ ಕಾರಣ ಸರ್ಕಾರದಿಂದ ಓಟಿಪಿ ಮೂಲಕ ಪಡಿತರ ಪಡೆಯಲು ಬಯೋ ಮೆಟ್ರಿಕ್ ಕಡ್ಡಾಯಗೊಳಿಸಲಾಗಿದೆ. ಬಯೋಮೆಟ್ರಿಕ್ ತೊಂದರೆ ಇರುವ ಪಡಿತರದಾರರಿಗೆ ಮಾತ್ರ ಒಟಿಪಿ ಮೂಲಕ ಪಡಿತರ ಪಡೆಯಲು ಅವಕಾಶ ಕಲ್ಪಿಸಲಾಗಿದೆ ಎಂದರು.

ಗ್ಯಾರಂಟಿ ಯೋಜನೆಗಳ ಸಮಿತಿಯ ಜಿಲ್ಲಾ, ತಾಲೂಕಾ ಅಧ್ಯಕ್ಷರು ಗ್ಯಾರಂಟಿ ಯೋಜನೆಗಳ ತಾಲೂಕುವಾರು ಅನಿಸಿಕೆ ತಿಳಿಸಲುಅಥವಾದೂರುಗಳನ್ನುನೋಂದಣಿ ಮಾಡಲು ಗೂಗಲ್ ಸ್ಪ್ರೆಡ್ ಶೀಟ್ ಲಿಂಕ್ ಶೀಘ್ರದಲ್ಲೇ ಬಿಡುಗಡೆ ಮಾಡಲಿದ್ದು, ಫಲಾನುಭವಿಗಳಿಗೆ ಯಾವುದೇ ರೀತಿಯಲ್ಲಿ ತೊಂದರೆ ಎದುರಾದಲ್ಲಿ ಲಿಂಕ್ ಮೂಲಕ ದೂರು ಸಲ್ಲಿಸಬಹುದಾಗಿದೆ.

ಸರ್ಕಾರದಿಂದ ಪಂಚ ಗ್ಯಾರಂಟಿ ಯೋಜನೆಗಳಡಿ ಪ್ರತಿ ಕುಟುಂಬಕ್ಕೆ ಸರಿ ಸುಮಾರು 10 ಸಾವಿರ ವರೆಗೆ ಆರ್ಥಿಕ ಹೊರೆ ಕಡಿಮೆಯಾಗಿದೆ.

ಆಯಾ ಇಲಾಖೆಗಳಲ್ಲಿ ಕೆಲವು ತಾಂತ್ರಿಕ ತೊಂದರೆ ಇರುವ ಕಾರಣ ಫಲಾನುಭವಿಗಳು ಸಹಕರಿಸಲು ಗ್ಯಾರಂಟಿ ಸಮಿತಿ ಸದಸ್ಯರು ತಿಳಿಹೇಳಬೇಕು.

ಆಯಾ ಇಲಾಖೆಯಿಂದ ನಿಗದಿತ ಅವಧಿಯೊಳಗೆ ತಾಂತ್ರಿಕ ದೋಷ ಸರಿಪಡಿಸಲಾಗುವುದು ಎಂದು ಹೇಳಿದರು. ಯುವನಿಧಿ ಯೋಜನೆ ಪರಿಣಾಮಕಾರಿ ಅನುಷ್ಠಾನಕ್ಕೆ ತಾಲೂಕಾ ಮಟ್ಟದಲ್ಲಿ ಕಾಲೇಜುಗಳಿಗೆ ಗ್ಯಾರಂಟಿ ಸಮಿತಿ ಸದಸ್ಯರು ಭೇಟಿ ನೀಡಿ ಪದವೀಧರ ಮಾಹಿತಿ ಪಡೆದು ನೋಂದಣಿ ಮಾಡಿಕೊಳ್ಳದ ಅಭ್ಯರ್ಥಿಗಳಿಗೆ ನೋಂದಣಿ ಮಾಡಿಸಿಕೊಳ್ಳುವಂತೆ ಅಭಿಯಾನ ಹಮ್ಮಿಕೊಳ್ಳಬೇಕು ಎಂದು ತಿಳಿಸಿದರು.

ಗ್ಯಾರಂಟಿ ಯೋಜನೆಗಳ ಸಮಿತಿ ಬಗ್ಗೆ ಅಧಿವೇಶನದಲ್ಲಿ ಚರ್ಚೆಯಾಗಿದೆ. ಎಲ್ಲ ಪದಾಧಿಕಾರಿಗಳು ನಮ್ಮ ವ್ಯಾಪ್ತಿಯಲ್ಲಿ ಸಮರ್ಪಕವಾಗಿ ಕಾರ್ಯ ನಿರ್ವಹಿಸಬೇಕು. ಸರ್ಕಾರದ ವಿವಿಧ ಯೋಜನೆಗಳನ್ನು ತಲುಪಿಸುವ ನಿಟ್ಟಿನಲ್ಲಿ ಎಲ್ಲ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರು ಕಾರ್ಯ ನಿರ್ವಹಿಸಬೇಕು ಎಂದು ಜಿ.ಪಂ ಸಿಇಓ ರಾಹುಲ್ ಶಿಂಧೆ ತಿಳಿಸಿದರು.

ಖಾನಾಪೂರ ತಾಲೂಕಿನ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಮಾತನಾಡಿ ಖಾನಾಪೂರ ತಾಲೂಕಿನ ಕೆಲವು ಪಡಿತರ ಅಂಗಡಿಗಳಲ್ಲಿ ಸರಿಯಾದ ತೂಕದಲ್ಲಿ ಪಡಿತರ ವಿತರಣೆ ಮಾಡುತ್ತಿಲ್ಲ. ವಿಚಾರಿಸಿದರೆ ಸಮಂಜಸವಲ್ಲದ ಉತ್ತರ ನೀಡುತ್ತಿದ್ದಾರೆ ಹಾಗಾಗಿ ಅಂತಹ ಅಂಗಡಿಗಳ ವಿರುದ್ಧ ದೂರುಗಳನ್ನು ಸ್ವೀಕರಿಸಿ ಕ್ರಮ ಜರುಗಿಸಬೇಕು ಎಂದು ವಿನಂತಿಸಿದರು.

ಈಗಾಗಲೇ ನೀಡಲಾಗುತ್ತಿರುವ 5 ಕೆ.ಜಿ ಅಕ್ಕಿ ಬದಲಿಗೆ ಹಣ ಸಂದಾಯ ಮಾಡಲಾಗುತ್ತಿದ್ದು, ಡಿಸೆಂಬರ್ ಮಾಹೆಯಲ್ಲಿ ಹಣ ನೀಡಲಾಗಿದೆ ಜನವರಿ ತಿಂಗಳು ಮಾತ್ರ ಬಾಕಿಯಿದೆ. ಫೆಬ್ರುವರಿ ತಿಂಗಳಿನಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ತಲಾ 5 ಕೆ.ಜಿ ಅಕ್ಕಿ ನೀಡಲಾಗುತ್ತಿದೆ ಎಂದು ಎಂದು ಆಹಾರ ಇಲಾಖೆ ಉಪ ನಿರ್ದೇಶಕ ಮಲ್ಲಿಕಾರ್ಜುನ್ ನಾಯಕ ವಿವರಿಸಿದರು.

ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಬಸವರಾಜ ಹೆಗ್ಗನಾಯಕ ಅವರು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸಭೆ ನಿರ್ವಹಿಸಿದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State